“ ಸಹಕಾರಂ ಗೆಲ್ಗೆ”



# ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.)

# ನೂರರ ಸಂಭ್ರಮ















## ಸ್ಮರಣ ಸಂಚಿಕೆ -2021

## ಪಾಕ್ಸ್ ಡೈರೆಕ್ಟರಿ

# ನೂರರ ಸಂಭ್ರಮ

**ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.)**
**ಇದರ ಶತಮಾನೋತ್ಸವ ಸ್ಮರಣ ಸಂಚಿಕೆ – ಪಾಕ್ಸ್ ಡೈರೆಕ್ಟರ್**


**ದೂರವಾಣಿ : (ಕೋಡ್ 08256)**
**ಮುಂಡಾಜೆ ಕೇಂದ್ರ ಕಚೇರಿ ಮತ್ತು ಮಾರಾಟ ಖರೀದಿ ಕೇಂದ್ರ : 295230 ಸೋಮಂತಡ್ಕ ಶಾಖೆ: 295235**
**ಕಕ್ಕಿಂಜೆ ಶಾಖೆ : 200133 ಮುಂಡಾಜೆ ಶಾಖೆ : 288231 ನೆರಿಯ ಶಾಖೆ : 200732**
Email : mundajebnk1@gmail.com


---


ಗೌರವ ಸಂಪಾದಕರು

**ಎನ್.ಎಸ್. ಗೋಖಲೆ**

ಸಹಕಾರ

**ಶ್ರೀ ನಾರಾಯಣ ಫಡ್ಕೆ**
**ಶ್ರೀ ಪ್ರಕಾಶ ನಾರಾಯಣ ರಾವ್**
**ಶ್ರೀ ಗಜಾನನ ವಝೆ**

ಮುದ್ರಣ

**2021**

ಪುಟಗಳು : 184

ಬೆಲೆ : **ರೂ. 100/–**

ಮುದ್ರಣ : **ಮಂಜುಶ್ರೀ ಪ್ರಿಂಟರ್ಸ್, ಉಜಿರೆ**

# ಸಮರ್ಪಣೆ



ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಂಘ ಆರಂಭವಾಗಿ 100 ವರುಷಗಳು ಕಳೆದವು. ಈ ನೆನಪಿಗಾಗಿ ಶ್ರೀ ಎನ್. ಎಸ್. ಗೋಖಲೆಯವರ ಕನಸಿನ ಶತಮಾನೋತ್ಸವ ಸಂಕೀರ್ಣ ಈಗಾಗಲೇ ಲೋಕಾರ್ಪಣೆಗೊಂಡಿದೆ. ಇದೇ ವೇಳೆ ಅವಿಭಜಿತ ದ.ಕ ಜಿಲ್ಲೆಯ ಪ್ಯಾಕ್ಸ್‌ಗಳ ಡೈರೆಕ್ಟರಿ ಅಧಿಕೃತವಾಗಿ 21-02-2021ರಂದು ಬಿಡುಗಡೆಯಾಗಿದ್ದರೂ, ಮಾಹಿತಿ ಸಂಗ್ರಹ ತಡವಾದುದರಿಂದ ಪ್ರಕಟಿಸಲು ಸ್ವಲ್ಪ ತಡವಾಗಿದೆ. ಈ ವೇಳೆ ಸಂಘದ ಏಳಿಗೆಯಲ್ಲಿ ಸಂಪೂರ್ಣ ತೊಡಗಿಸಿಕೊಂಡಿದ್ದ ಹಾಗೂ ಈ ಸಂಚಿಕೆಯ ಸಂಪಾದಕರಾದ ಎನ್. ಎಸ್. ಗೋಖಲೆಯವರು ನಿಧನರಾಗಿರುವುದು ನಮಗೆಲ್ಲ ತುಂಬಲಾರದ ನಷ್ಟ. ಈ ಸಂಚಿಕೆಯನ್ನು ಶ್ರೀ ದಿ| ಎನ್. ಎಸ್. ಗೋಖಲೆಯವರಿಗೆ ಅರ್ಪಿಸುತ್ತಿದ್ದೇವೆ.

ಎಲ್ಲಾ ಹಿರಿಯ ಕಿರಿಯ ಸಹಕಾರಿಗಳಿಗೆ ವಂದನೆಗಳು.

ಶ್ರೀ ಜನಾರ್ದನ ಗೌಡ, ಅಧ್ಯಕ್ಷರು

ಮುಂಡಾಜೆ ಪ್ಯಾಕ್ಸ್



# ಶುಭ ಸಂದೇಶ

**ಡಿ. ವೀರೇಂದ್ರ ಹೆಗ್ಗಡೆಯವರು**
ಶ್ರೀ ಕ್ಷೇತ್ರ ಧರ್ಮಸ್ಥಳ– 574 216

ದಿನಾಂಕ : 29–01–2021

ನಿಮ್ಮ ಸಹಕಾರಿ ಸಂಘವು ನೂರು ವರ್ಷಗಳ ಸಾರ್ಥಕ ಸೇವೆಯನ್ನು ಪೂರೈಸಿದ್ದು ಶತಮಾನೋತ್ಸವ ಆಚರಿಸಲಿರುವ ವಿಚಾರ ತಿಳಿದು ಸಂತೋಷವಾಯಿತು.

ಭಾರತ ದೇಶದ ಪ್ರಗತಿಯಲ್ಲಿ ಸಹಕಾರಿ ಕ್ಷೇತ್ರ ಪ್ರಮುಖ ಪಾತ್ರ ವಹಿಸಿದೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಗ್ರಾಮೀಣ ಪ್ರದೇಶದಲ್ಲಿ ಜನತೆಯ ಸಂಘಟನೆ, ಪ್ರಗತಿ ಮತ್ತು ಸ್ವಯಂ ಆಡಳಿತಕ್ಕೆ ಸಹಕಾರಿ ತತ್ವವನ್ನು ಪ್ರೋತ್ಸಾಹಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಕೂಡಾ ಅವರು ಸತ್ಯ ಮತ್ತು ಅಹಿಂಸೆಯೊಂದಿಗೆ ಸಹಕಾರಿ ತತ್ವದ ಚಳವಳಿ ನಡೆಸಿ ಯಶಸ್ವಿಯಾದರು.

ನೂರು ವರ್ಷಗಳ ಹಿಂದೆಯೇ ಅತಿ ಹಿಂದುಳಿದ ಗ್ರಾಮೀಣ ಪ್ರದೇಶವಾದ ಮುಂಡಾಜೆಯಲ್ಲಿ ಸಮಕಾಲೀನ ಸಹಕಾರಿ ಮುಂದಾಳುಗಳು ಸೇರಿ ಕೃಷಿಕರನ್ನು ಸಂಘಟಿಸಿ ಪ್ರೋತ್ಸಾಹಿಸಿದರು. ಹಿರಿಯ ಸಹಕಾರಿ ಧುರೀಣರಾದ ಮುಂಡಾಜೆಯ ಶ್ರೀ ಎನ್.ಎಸ್. ಗೋಖಲೆಯವರು ಅನೇಕ ವರ್ಷಗಳಿಂದ ಸಹಕಾರಿ ರಂಗದಲ್ಲಿ ಉತ್ತಮ ಸೇವೆ ನೀಡುತ್ತಿದ್ದಾರೆ. ಜಿಲ್ಲಾ ಮಟ್ಟದಲ್ಲಿಯೂ ತಮ್ಮ ಸೇವೆ–ಸಾಧನೆಯಿಂದ ಚಿರಪರಿಚಿತರಾಗಿದ್ದಾರೆ.

ನಿಮ್ಮ ಸಹಕಾರಿ ಸಂಘದ ಶತಮಾನೋತ್ಸವ ಆಚರಿಸುವುದು ಔಚಿತ್ಯಪೂರ್ಣವಾಗಿದೆ. “ಹಳೆ ಬೇರು, ಹೊಸ ಚಿಗುರು ಕೂಡಿರಲು ಮರ ಸೊಬಗು” ಎನ್ನುವಂತೆ ಎನ್. ಎಸ್. ಗೋಖಲೆಯವರಂತಹ ಹಿರಿಯರ ಅನುಭವ ಮತ್ತು ಮಾರ್ಗದರ್ಶನದೊಂದಿಗೆ ಯುವಜನತೆಯೂ ಸೇರಿ ಶತಮಾನೋತ್ಸವ ಆಚರಣೆಯ ಸವಿನೆನಾಗಿ ನೂತನ ಕಟ್ಟಡದ ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಸ್ತುತ್ಯಾರ್ಹವಾಗಿದೆ.

ಶತಮಾನೋತ್ಸವ ಆಚರಣೆ ಹಾಗೂ ಸಂಬಂಧಿಸಿದ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಲೆಂದು ಹಾರೈಸುತ್ತಾ ನಿಮ್ಮ ಸಹಕಾರಿ ಸಂಘ ಉತ್ತರೋತ್ತರ ಪ್ರಗತಿಯನ್ನು ಸಾಧಿಸುವಂತೆ ಶ್ರೀ ಮಂಜುನಾಥ ಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ.

ಇತೀ,

ಡಿ. ವೀರೇಂದ್ರ ಹೆಗ್ಗಡೆ

(ಡಿ. ವೀರೇಂದ್ರ ಹೆಗ್ಗಡೆಯವರು)



# ಶುಭ ಸಂದೇಶ

ಬೆಳ್ತಂಗಡಿ ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ, ಈ ಸಂಸ್ಥೆ 100 ವರ್ಷಗಳ ಸಾರ್ಥಕ ಸೇವೆಯನ್ನು ಸಹಕಾರ ರಂಗದಲ್ಲಿ ಪೂರೈಸಿ, ಶತಮಾನೋತ್ಸವ ಆಚರಣೆಯ ಸಂಭ್ರಮದಲ್ಲಿರುವುದು ಸಂತೋಷದ ವಿಷಯ. ಪ್ರಸ್ತುತ ತಮ್ಮ ಸಂಸ್ಥೆ ನಿರಂತರ ಸೇವೆಯೊಂದಿಗೆ 100 ವರ್ಷಗಳನ್ನು ಪೂರೈಸಿರುವುದು ಅಭಿನಂದನೀಯ. ಯಾವುದೇ ಒಂದು ಸಹಕಾರಿ ಸಂಸ್ಥೆ ನಿರಂತರವಾಗಿ ಸೇವಾ ಚಟುವಟಿಕೆಯಲ್ಲಿ ಗುರುತಿಸಿಕೊಂಡು ತನ್ನ ಸದಸ್ಯ ವರ್ಗಕ್ಕೆ ಅತ್ಯಾಧುನಿಕ ಗುಣಮಟ್ಟದ ಸೇವೆಯನ್ನು ನೀಡಿ ಶತಮಾನೋತ್ಸವವನ್ನು ಆಚರಿಸುವುದು ಆ ಸಂಸ್ಥೆಯ ಸೇವಾ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

ರೈತಾಪಿ ವರ್ಗದ ಸದಸ್ಯರ ಆರ್ಥಿಕ ಅವಶ್ಯಕತೆಗೆ ಸ್ಪಂದಿಸುತ್ತಿರುವ ಈ ಸಂಸ್ಥೆ ಸಾರ್ವಜನಿಕ ಸೇವಾ ಮನೋಭಾವವನ್ನು ಬೆಳೆಸಿಕೊಂಡಿರುವುದು ಶ್ಲಾಘನೀಯ.


ಈ ಸಂದರ್ಭದಲ್ಲಿ ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿಯಮಿತ ಇದರ ಅಭಿವೃದ್ಧಿಗೆ ಕಾರಣರಾದ ಎಲ್ಲಾ ಸದಸ್ಯ ವರ್ಗವನ್ನು, ಆಡಳಿತ ಮಂಡಳಿಯ ಪದಾಧಿಕಾರಿಗಳನ್ನು, ಎಲ್ಲಾ ಗೌರವಾನ್ವಿತ ನಿರ್ದೇಶಕರುಗಳನ್ನು ಹಾಗೂ ಸಿಬ್ಬಂದಿ ವರ್ಗವನ್ನು ನಾನು ಅಭಿನಂದಿಸುತ್ತೇನೆ.

ಶತಮಾನೋತ್ಸವ ಸಂಭ್ರಮದ ಸವಿನೆನಪಿಗಾಗಿ ಹೊರತರುವ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪ್ಯಾಕ್ಸ್ ಸಂಸ್ಥೆಗಳ ಸಮಗ್ರ ಕೈಪಿಡಿಯು ಆಕರ್ಷಕವಾಗಿ ಹಾಗೂ ಸಹಕಾರ ಕ್ಷೇತ್ರದ ಮಾಹಿತಿಯೊಂದಿಗೆ ಮೂಡಿ ಬರಲಿ ಎಂದು ಈ ಸಂದರ್ಭದಲ್ಲಿ ಶುಭ ಆಶಿಸುತ್ತೇನೆ.

ವಂದನೆಗಳೊಂದಿಗೆ,

ಇತೀ ತಮ್ಮ ವಿಶ್ವಾಸಿ,

**ಡಾ। ಎಂ.ಎನ್. ರಾಜೇಂದ್ರ ಕುಮಾರ್**
**ಅಧ್ಯಕ್ಷರು**
**ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ನಿ.)**




# ಶುಭ ಸಂದೇಶ

ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನೂರು ವರ್ಷಗಳ ಸಾರ್ಥಕ ಸೇವೆಯನ್ನು ಪೂರೈಸುತ್ತಿರುವುದು ಸಂತಸದ ವಿಷಯ.

ಗ್ರಾಮೀಣ ಪ್ರದೇಶವೊಂದರಲ್ಲಿ ನೂರು ವರ್ಷಗಳನ್ನು ಪೂರೈಸಿ ರೈತರಿಗೆ ಕೃಷಿ ಕಾರ್ಮಿಕರಿಗೆ ನಿರಂತರ ಸೇವೆ ಸಲ್ಲಿಸುತ್ತಾ ಅಭಿವೃದ್ಧಿ ಪಥದಲ್ಲಿ ಸಾಗುತ್ತಿರುವ ಈ ಸಂಸ್ಥೆಗೆ ಅಪ್ಪೆಲ ಶ್ರೀ ಉಮಾ ಪಂಚಲಿಂಗೇಶ್ವರ ದೇವರ ಕೃಪಾಶೀರ್ವಾದವಿರಲೆಂದು ಹಾರೈಸುತ್ತೇನೆ. ಮುಂಡಾಜೆ ಗ್ರಾಮದ ಸೋಮಂತಡ್ಕದಲ್ಲಿ ಶತಮಾನೋತ್ಸವ ಸಂಕೀರ್ಣ ನಿರ್ಮಿಸುತ್ತಿರುವುದು ಸಂತಸ ಉಂಟುಮಾಡಿದೆ. ಅಧ್ಯಕ್ಷರಿಗೆ, ಆಡಳಿತ ಮಂಡಳಿ ಸದಸ್ಯರಿಗೆ, ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳು.

ಸಂಘದ ನೆರಿಯ ಶಾಖಾ ಕಟ್ಟಡ 'ಸಂಪದ'ದ ಉದ್ಘಾಟನಾ ಕಾರ್ಯಕ್ರಮದಲ್ಲಿ ನಾನೂ ಭಾಗವಹಿಸುವ ಭಾಗ್ಯ ನನ್ನ ಪಾಲಿಗೆ ಬಂದಿತ್ತೆಂಬುದನ್ನು ನೆನಪಿಸಿಕೊಳ್ಳಲು ಸಂತಸವಾಗುತ್ತಿದೆ.

ವಂದನೆಗಳೊಂದಿಗೆ



**ರಾಜಗೋಪಾಲ ಹೆಬ್ಬಾರ್**

ನೆರಿಯ



# ಶುಭ ಸಂದೇಶ

ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.) ಆಚರಿಸುತ್ತಿರುವ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಶತಮಾನೋತ್ಸವದ ಸಂಕೀರ್ಣ ಲೋಕಾರ್ಪಣೆ ಹಾಗೂ ಸಹಕಾರಿ ಸಂಘದ ಶತಮಾನೋತ್ಸವದ ಕಾರ್ಯಕ್ರಮದ ಉದ್ಘಾಟನೆ ಕಾರ್ಯಕ್ರಮಗಳನ್ನು ಶತಮಾನೋತ್ಸವದ ಸಂಕೀರ್ಣದ ವಠಾರದಲ್ಲಿ ನೆರವೇರಿಸಲಿದ್ದಾರೆ. ಈ ಸಹಕಾರಿ ಸಂಘ 100 ವರ್ಷಗಳ ಹಿಂದೆ ಪ್ರಾರಂಭವಾಗಿದ್ದು ಅನೇಕ ರೈತರಿಗೆ ಆರ್ಥಿಕ ನೆರವನ್ನು ನೀಡಿ ಅವರೆಲ್ಲರ ಆರ್ಥಿಕತೆಯನ್ನು ಹೆಚ್ಚಿಸಿರುವುದಲ್ಲದೆ ಎಲ್ಲಾ ರೈತರಿಗೂ ಅವರ ಕಾಲ ಮೇಲೆ ನಿಲ್ಲುವ ಶಕ್ತಿಯನ್ನು ಈ ಸಹಕಾರಿ ಸಂಘ ಕೊಟ್ಟಿದೆ, ಸಹಕಾರಿ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಸರ್ವ ಸದಸ್ಯರು ಅಲ್ಲದೇ ಸಿಬ್ಬಂದಿ ವರ್ಗದವರ ದುಡಿಮೆಯ ಫಲವಾಗಿ ಈ ಸಹಕಾರಿ ಸಂಘ ಬಹಳ ಎತ್ತರಕ್ಕೆ ಏರಿದೆ ಎಂದು ಹೇಳಲು ನಾನು ಸಂತೋಷ ಪಡುತ್ತೇನೆ.

ಇನ್ನು ಮುಂದಕ್ಕೂ ಈ ಸಹಕಾರಿ ಸಂಘ ಬಹಳಷ್ಟು ಎತ್ತರಕ್ಕೆ ಏರಿ ಸುತ್ತ ಮುತ್ತಲಿನ ಹೆಚ್ಚಿನ ಎಲ್ಲಾ ರೈತರಿಗೆ ಆರ್ಥಿಕ ನೆರವನ್ನು ನೀಡುವಂತಾಗಲಿ ಎಂದು ಹಾರೈಸುತ್ತೇನೆ.

ತಮ್ಮ ಸಂಘದ ಕಕ್ಕಿಂಜೆ ಶಾಖೆಯ ನೂತನ ಕಟ್ಟಡದ ಲೋಕಾರ್ಪಣೆಯಲ್ಲಿ ನಾನು ಭಾಗವಹಿಸಿದ್ದುದನ್ನು ನೆನಪಿಸಿಕೊಳ್ಳುತ್ತಾ,

ಶುಭಕಾಮನೆಗಳೊಂದಿಗೆ

(ಕೆ. ವಸಂತ ಬಂಗೇರ)
ಮಾಜಿ ಶಾಸಕರು
'ಸುಪ್ರಭಾತ', ಬೆಳ್ತಂಗಡಿ

# ಹೃದ್ಗತ



ಸಂಸ್ಥೆಯೊಂದು ಬೆಳೆದು ನೂರು ವಸಂತಗಳನ್ನು ಕಂಡು ಮುಂದುವರಿಯುವಾಗ ಶತಮಾನೋತ್ಸವವನ್ನು ಆಚರಿಸುವುದೂ ಇದರ ಒಂದಂಗವಾಗಿ ಸ್ಮರಣ ಸಂಚಿಕೆ ಹೊರತರುವುದೂ ಸಾಮಾನ್ಯ ಸಂಗತಿ. ಆದರೆ ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ಪಾಕ್ಸ್)ವು ತನ್ನ ನೂರರ ಸಂಭ್ರಮದಲ್ಲಿ ಸುಸಜ್ಜಿತ ಉತ್ತಮ ವರಮಾನವನ್ನೂ ತರುವ ಶತಮಾನೋತ್ಸವ ಸಂಕೀರ್ಣವನ್ನು ಲೋಕಾರ್ಪಣೆ ಮಾಡುತ್ತ ವರ್ಷವಿಡೀ ಸಮಾಜಮುಖೀ ವಿಭಿನ್ನ ವಿಧಾಯಕ ಕಾರ್ಯಕ್ರಮಗಳ ಸಂಕಲ್ಪ ಕೈಗೊಂಡು ಸ್ಮರಣ ಸಂಚಿಕೆಯಲ್ಲಿ ಅವಿಭಜಿತ ಜಿಲ್ಲೆಯ 'ಪಾಕ್ಸ್'ಗಳ ಸಂಕ್ಷಿಪ್ತ ಮಾಹಿತಿ ತುಂಬಿದ ಮುಂದೆ ಪಾಕ್ಸ್‌ಗಳಿಗೆ ಸಂಗ್ರಾಹ್ಯಯೋಗ್ಯವಾಗಿ ಉಪಯುಕ್ತ ವಾಗಬಹುದಾದ "ಡೈರೆಕ್ಟರಿ ಪ್ರಕಟಣೆಗೆ ಮುಂದಾಗಿರುವುದು ಸ್ವಾಗತಾರ್ಹ ಹಾಗೂ ಅಭಿನಂದನೀಯ.

"ಪಾಕ್ಸ್"ಗಳ ಬಗ್ಗೆಯೇ ಒಂದು "ಕ್ಷ"ಕಿರಣ ಬೀರಬಲ್ಲ ಲೇಖನ, ಇಡೀ ಸಹಕಾರ ಚಳವಳಿ ನಡೆದು ಬಂದ ಬಗ್ಗೆ ಸಿಂಹಾವಲೋಕನ, ನಮ್ಮ ಪರಿಸರದ ಬಗ್ಗೆ ಕಿರುಲೇಖನ ಮತ್ತು ನಮ್ಮ ಮುಂಡಾಜೆ ಪಾಕ್ಸ್ ಬಗ್ಗೆ ಒಂದು ಹಿನ್ನೋಟ, ಆಯ್ದ ಗಣ್ಯರ ಸಂದೇಶಗಳನ್ನು ಮಾತ್ರ ಹೊತ್ತು ತರುವ ಈ ಡೈರೆಕ್ಟರಿ "ಪಾಕ್ಸ್"ಗಳ ಭವಿಷ್ಯದ ಬಗ್ಗೆ ಎಲ್ಲ ಸದಸ್ಯರಿಗೆ ಚಿಂತಿಸಲು ಅವಕಾಶ ನೀಡಿ, ಈ ಚಿಂತನೆಗಳು "ಪಾಕ್ಸ್"ಗಳನ್ನು ಗಟ್ಟಿಗೊಳಿಸುವ ಕಾಯಕಕ್ಕೆ ನಾಂದಿ ಹಾಡಿದರೆ ಅದುವೇ "ಮುಂಡಾಜೆ ಪಾಕ್ಸ್"ನ ಶತಮಾನೋತ್ಸವದ ಸಂಭ್ರಮದ ಕಾಣಿಕೆಯಾಗಬಹುದು.

ಈ "ಡೈರೆಕ್ಟರಿ"ಯ ಯೋಜನೆ ಮುಂದಿಟ್ಟಾಗ ಶುಭ ಹಾರೈಸಿ ಆಶೀರ್ವದಿಸಿದವರು ಶ್ರೀ ಧರ್ಮಸ್ಥಳದ ಪೂಜ್ಯ ಖಾವಂದರು, ಬೆನ್ನುತಟ್ಟಿ ಪ್ರೋತ್ಸಾಹಿಸಿದವರು ದ.ಕ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಸಹಕಾರಿ ರತ್ನ ಡಾ। ಎಂ. ಎನ್. ರಾಜೇಂದ್ರ ಕುಮಾರ್‌ರವರು. ಪ್ರಕಟಣೆಗೆ "ಅಸ್ತು" ಎಂದವರು ಮುಂಡಾಜೆ "ಪಾಕ್ಸ್"ನ ಆಡಳಿತ ಮಂಡಳಿಯವರು. ಸರ್ವಾಂಗ ಸುಂದರವಾಗಿ ಹೊರಬರಲು ಸಹಕರಿಸಿದವರು ಡಾ। ಡೋಂಗ್ರೆ ಮತ್ತು ಶ್ರೀ ಆರ್.ಕೆ. ಯವರು. ಅಗತ್ಯದ ಎಲ್ಲ ರೀತಿಗಳಿಂದ ದುಡಿದು ನೆರವಾದವರು ವಸುಧೇಶ್ ಫಾಟಕ್, ಮುಂಡಾಜೆ ಪಾಕ್ಸ್, ಹಾಗೂ ಮಂಜುಶ್ರೀ ಮುದ್ರಣಾಲಯದ ಸಿಬ್ಬಂದಿಗಳು. ಇವರಿಗೆಲ್ಲ ನನ್ನ ಕೃತಜ್ಞತಾಪೂರ್ವಕ ನಮನಗಳು.

"ಪಾಕ್ಸ್"ಗಳ ಬಗ್ಗೆ ನಾವೆಲ್ಲ ಚೆನ್ನಾಗಿದ್ದಾವೆ ಎಂದೇ ತಿಳಿದಿದ್ದೇವೆ. ಅದು ಕಾಸರಗೋಡು ಜಿಲ್ಲೆಯೂ ಸೇರಿದಂತೆ ಅವಿಭಜಿತ ದ.ಕ. ಜಿಲ್ಲೆಯ ಮಣ್ಣಿನಗುಣ. ಈ ಪರಶುರಾಮ ಸೃಷ್ಟಿಯ ಭಾಗದಲ್ಲಿ ಹುಟ್ಟಿಕೊಂಡ ಎಲ್ಲವೂ (ಬ್ಯಾಂಕ್‌ಗಳು, ವಿದ್ಯಾ ಸಂಸ್ಥೆಗಳು, ಆರೋಗ್ಯ ಧಾಮಗಳು, ಕೈಗಾರಿಕೆಗಳು ಇತ್ಯಾದಿ ಇತ್ಯಾದಿ) ಚೆನ್ನಾಗಿಯೇ ಕೆಲಸ ನಿರ್ವಹಿಸುತ್ತಿವೆ. ಅದರಂತೆ ಇಲ್ಲಿಯ ಸಹಕಾರಿ ಸಂಸ್ಥೆಗಳು "ಪಾಕ್ಸ್"ಗಳೂ ಕೂಡ.

ಆದರೆ ಇಡೀ ರಾಷ್ಟ್ರಮಟ್ಟದಲ್ಲಿ "ಪಾಕ್ಸ್‌ಗಳ" ನಿರ್ವಹಣೆ ತೃಪ್ತಿದಾಯಕವಾಗಿಲ್ಲ. ಹಲವಾರು ಪ್ರಯೋಗಗಳ ನಂತರವೂ ಇದನ್ನು B.C. (Business Carespondent) ಆಗಿ ಮಾರ್ಪಡಿಸುವ ಪ್ರಸ್ತಾಪಗಳೂ ಇನ್ನೂ

ಜೀವಂತವಾಗಿದೆ. ಹಾಗಾದಲ್ಲಿ ಠೇವಣಾತಿ ಸಂಗ್ರಹ "ಪಾಕ್ಸ್‌ಗಳ ಕೈಯಿಂದ ಜಾರಲಿದೆ. ಸಾಲ ವಸೂಲಾತಿಯ ಹೊಣೆ ಮಾತ್ರ ಉಳಿಯುವ ಭೀತಿಯೂ ಇದೆ. ಕೃಷಿಸಾಲ ನೀಡಿಕೆಯಲ್ಲಿ 2tier / 3tier ಬಗ್ಗೆಯೂ ಪ್ರಸ್ತಾಪಗಳಿವೆ. ಕೇರಳದಲ್ಲಿ DCC ಬ್ಯಾಂಕ್‌ಗಳನ್ನು ರಾಜ್ಯ ಅಪೆಕ್ಸ್ ಬ್ಯಾಂಕಿನ ಶಾಖೆಗಳಾಗಿ ಮಾರ್ಪಡಿಸಿಕೊಂಡು 2tierನ್ನು ನೆಚ್ಚಿಕೊಂಡು ಎದುರಿಸುತ್ತಿರುವ ಸಮಸ್ಯೆಗಳೂ ನಮ್ಮ ಮುಂದಿವೆ.

ಈ ಪ್ರದೇಶದ ಪಾಕ್ಸ್‌ಗಳು ಸರಕಾರದ ಪಾಲು ಬಂಡವಾಳದ ಸಹಾಯವಿಲ್ಲದೇ ಕೇವಲ ಸ್ವಂತ ಸಂಪನ್ಮೂಲ ಹಾಗೂ ಜಿಲ್ಲಾ ಬ್ಯಾಂಕಿನ ಆರ್ಥಿಕ ಸಹಾಯದಿಂದ ಯಶಸ್ವಿಯಾಗಿ ಕೆಲಸ ನಿರ್ವಹಿಸುತ್ತಿವೆ. ಹೆಚ್ಚಿನವು 'A' ವರ್ಗದ ಆಡಿಟ್ ವರ್ಗೀಕರಣ, ಉತ್ತಮ ಲಾಭ ಮತ್ತು ಡಿವಿಡೆಂಡ್ ಘೋಷಣೆಗಳೊಂದಿಗೆ ಮುಂದುವರಿಯುತ್ತಿವೆ. ಕನಿಷ್ಠ ಅವಿಭಜಿತ ಜಿಲ್ಲೆಯ "ಪಾಕ್ಸ್"ಗಳ ಮಟ್ಟಿಗಾದರೂ ರಾಷ್ಟ್ರದಲ್ಲಿಯೇ ಅತ್ಯುತ್ತಮ ಪಾಕ್ಸ್‌ಗಳೆಂಬ ಕಾರಣದಿಂದಲಾದರೂ R.B.I.ಯ ನೇರ ಮಾರ್ಗದರ್ಶನ ಇತ್ಯಾದಿಗಳ ಆಧಾರದಲ್ಲಿ ಈ ಪ್ರದೇಶಕ್ಕೆ "DCC BANK" ಮತ್ತು "ಪಾಕ್ಸ್" ಎಂಬ ಎರಡೇ ಮಟ್ಟ (2tier)ಗಳನ್ನಿಟ್ಟುಕೊಂಡು ಸ್ವಾಯತ್ತ, ವಿವಿಧೋದ್ದೇಶಗಳಿಗಾಗಿ ಕೆಲಸ ನಿರ್ವಹಿಸುವ "ಪಾಕ್ಸ್"ಗಳೆಂಬ ಹೆಗ್ಗಳಿಕೆಯಿಂದ ರಾಷ್ಟ್ರದಲ್ಲೇ ವಿಶೇಷವಾಗಿ ಗುರುತಿಸಿಕೊಂಡು ಕೆಲಸ ನಿರ್ವಹಿಸುವ ಶಕ್ತಿ ಈ ಭಾಗದ "ಪಾಕ್ಸ್"ಗಳಿಗಿದೆ. ಪ್ರಕೃತದ ಸ್ಥಿತಿಯಲ್ಲಿ ಡಾ। ಎಮ್. ಎನ್. ರಾಜೇಂದ್ರ ಕುಮಾರ್‌ರವರ ನಾಯಕತ್ವದಲ್ಲಿ ಮುನ್ನುಗ್ಗಿ ನಡೆದರೆ ಇದು ಸಾಧ್ಯವಾಗಬಹುದು. ಹಾಗಾಗಲಿ ಎಂದು ಹಾರೈಸುತ್ತ ಈ ಡೈರೆಕ್ಟರಿಯ ಪ್ರಕಟಣೆಯಲ್ಲಿ ನೆರವು ನೀಡಿದ ಎಲ್ಲರಿಗೂ ಕರಜೋಡಿಸಿ ವಂದಿಸುತ್ತ ಎಲ್ಲರಿಗೂ ಸಪ್ರೇಮ ನಮನಗಳು.

**– ಎನ್.ಎಸ್. ಗೋಖಲೆ, ಮುಂಡಾಜೆ**

ಗೌರವ ಸಂಪಾದಕರು

# ಗ್ರಾಮೀಣ ಆರ್ಥಿಕ ಸ್ಥಿರತೆಯ ಊರುಗೋಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು



❑ ಯಶವಂತ ಡೋಂಗ್ರೆ

**ಭಾ**ರತದಲ್ಲಿ ಕೃಷಿ ಸಂಬಂಧೀ ಸಹಕಾರ ಸಂಘಗಳು ಅದರಲ್ಲೂ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಕೃಷಿಕರ ಹಾಗೂ ಗ್ರಾಮೀಣ ಜನರ ನಡುವೆ ಅವಿನಾಭಾವ ಸಂಬಂಧವಿದೆ. ಭಾರತದ ಸಹಕಾರೀ ಕ್ಷೇತ್ರದ ಆರಂಭವಾದುದೇ ಕೃಷಿ ಪತ್ತಿನ ಸಹಕಾರ ಸಂಘಗಳಿಂದ. 1904ರಲ್ಲಿ ಜಾಲ್ತಿಗೆ ಬಂದ ಭಾರತದ ಪ್ರಥಮ ಸಹಕಾರಿ ಕಾಯಿದೆಯು ಕೃಷಿ ಪತ್ತಿನ ಸಹಕಾರ ಸಂಘಗಳ ಸ್ಥಾಪನೆಗಾಗಿಯೇ ಹುಟ್ಟುಹಾಕಲ್ಪಟ್ಟಿತ್ತು. ಅಂತೆಯೇ ಇಂದಿಗೂ ಹಾಲಿನ ಸಹಕಾರಿ ಸಂಘಗಳನ್ನು ಹೊರತು ಪಡಿಸಿದರೆ ದೇಶದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿರುವ ಸಹಕಾರಿ ಸಂಘಗಳೆಂದರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು. 2019ರ ವೇಳೆಗೆ ದೇಶದಲ್ಲಿ ಸುಮಾರು 95,000ಕ್ಕೂ ಹೆಚ್ಚಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿದ್ದವು. ಸುಮಾರು 6,39,000 ಗ್ರಾಮಗಳಿಗೆ ಸೇವೆಯನ್ನು ಒದಗಿಸುವುದರ ಮೂಲಕ ಭಾರತದ ಅತಿಹೆಚ್ಚು ಗ್ರಾಮಗಳಿಗೆ ತಲುಪಿದ ಸಾಂಸ್ಥಿಕ ರಚನೆಗಳಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹೊರಹೊಮ್ಮಿರುವುದನ್ನು ನಾವೆಲ್ಲರೂ ಗಮನಿಸಬೇಕು.

ಆದರೆ ಇಂದಿನ ಆರ್ಥಿಕ ನೀತಿಗಳು ಸಹಕಾರಿ ಸಂಘಗಳಿಂದ ಹೊರತಾದ ಹೊಸ ವಿನ್ಯಾಸಗಳೆಡೆಗೆ ಹೆಚ್ಚಿನ ಒತ್ತು ನೀಡುತ್ತಿವೆ. ಉದಾಹರಣೆಗೆ ಕೃಷಿಕರ ಉತ್ಪಾದನಾ ಸಂಸ್ಥೆಗಳು (ಎಫ್‌ಪಿಓ) ಪ್ರವರ್ಧಮಾನಕ್ಕೆ ಬರುತ್ತ ಕೃಷಿ ಸಹಕಾರ ಸಂಘಗಳಿಗೆ ಹೆಚ್ಚಿನ ಉತ್ತೇಜನ ದೊರೆಯದಿರುವುದನ್ನು ಕಾಣಬಹುದು. ಹಾಗೆಯೇ ಕೃಷಿಗೆ ಸಂಬಂಧಿಸಿದಂತೆ ಇತ್ತೀಚೆಗೆ ಸರಕಾರವು ಬದಲಾವಣೆಮಾಡಿ ತಂದಿರುವ ಕಾನೂನುಗಳು ಕೂಡ ಖಾಸಗಿ ವಲಯಕ್ಕೆ ಪೂರಕವಾಗಿರುವಷ್ಟು ಸಹಕಾರಿ ಸಂಘಟನೆಗಳಿಗೆ ಅವಕಾಶಗಳನ್ನು ತೆರೆದಿಲ್ಲ. ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಪಾತ್ರವನ್ನು ಈ ಹಿನ್ನೆಲೆಯಲ್ಲಿ ಪರಾಮರ್ಷಿಸಿ ಮುಂದಿನ ಹಾದಿಯನ್ನು ನಿರ್ಧರಿಸಬೇಕಿದೆ.

ದೇಶದಲ್ಲಿರುವ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಒಟ್ಟಾರೆ ಕಾರ್ಯ ಸಾಮರ್ಥ್ಯವನ್ನು ಗಮನಿಸಿದರೆ ಕೆಲವು ಆತಂಕಗಳು ಸಹಜವಾಗಿಯೇ ಮೂಡುತ್ತವೆ. ಉದಾಹರಣೆಗೆ ಇತ್ತೀಚಿನ ಒಂದು ಅಧ್ಯಯನದ ಪ್ರಕಾರ ದೇಶದಲ್ಲಿರುವ ಒಟ್ಟು 95,238 ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳಲ್ಲಿ ಕೇವಲ 46,405 ಸಂಘಗಳು ಮಾತ್ರ ಲಾಭದಲ್ಲಿ ನಡೆಯುತ್ತಿದ್ದು ಆರ್ಥಿಕವಾಗಿ ಸಬಲವಾಗಿವೆ. ಅಂದರೆ ಅರ್ಧಕ್ಕಿಂತ ಹೆಚ್ಚಿನ ಸಂಘಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಇವುಗಳಲ್ಲಿ ಹೆಚ್ಚಿನ ಸಹಕಾರಿ ಸಂಘಗಳು ಸಾಲ ಬಾಕಿ, ಕೇವಲ ಒಂದೇ ವ್ಯವಹಾರದ ಮೇಲೆ ಅವಲಂಬನೆ, ಆಡಳಿತ ವೈಫಲ್ಯ ಮತ್ತು ಹಣಕಾಸಿನ ದುರ್ವ್ಯವಹಾರಗಳು ಮುಂತಾದ ಸಮಸ್ಯೆಗಳಿಂದ ಬಳಲುತ್ತಿವೆ. ಹೀಗಾಗಿ ಸಹಜವಾಗಿಯೇ ಸಹಕಾರಿ ಮಾದರಿಯು ವಿಫಲವಾಗಿದೆಯೆಂದು ಭಾವಿಸಲು ಹಾಗೂ ಪರ್ಯಾಯ ನೀತಿಗಳತ್ತ ಹೆಚ್ಚಿನ ಒಲವು ಮೂಡಲು ಕಾರಣವಾಗಿದೆ.

ಆದರೆ, ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳಿಗೆ ಸಂಬಂದ ಪಟ್ಟಂತೆ ಇನ್ನೊಂದು ಉತ್ತಮ ಮುಖವಿದೆ. ದೇಶದಲ್ಲಿ ವಿತರಣೆಯಾಗುತ್ತಿರುವ ಕೃಷಿ ಸಾಲದ, ಅದರಲ್ಲು ಬೆಳೆ ಸಾಲದಂತಹ ಅಲ್ಪಾವಧಿ ಸಾಲದ ಅತಿಹೆಚ್ಚಿನ ಭಾಗವನ್ನು ಇಂದಿಗೂ ವಿತರಿಸುತ್ತಿರುವುದು ಈ ಸಹಕಾರಿ ಸಂಘಗಳೇ. ಸಣ್ಣ ಹಾಗೂ ಅತಿ ಸಣ್ಣ ರೈತರ

ಹಣಕಾಸಿನ ಅಗತ್ಯದ ಶೇಕಡ ಅರವತ್ತರಷ್ಟು ಭಾಗವು ಸಹಕಾರಿ ಸಂಘಗಳಿಂದಲೇ ಕೊಡಮಾಡಲ್ಪಡುತ್ತಿದೆ. ದೇಶದ ಅತಿಹೆಚ್ಚು ಗ್ರಾಮೀಣ ಪ್ರದೇಶ ಹಾಗೂ ಅತಿ ಹೆಚ್ಚು ರೈತರಿಗೆ ಲಭ್ಯವಿರುವ ಸಾಂಸ್ಥಿಕ ರಚನೆ ಎಂದರೆ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು ಮಾತ್ರ. ಎಲ್ಲಕ್ಕಿಂತ ಹೆಚ್ಚಾಗಿ ಕೃಷಿಗೆ ಅತಿ ಮುಖ್ಯವಾದ ಅಗತ್ಯಗಳಾದ ಗೊಬ್ಬರ, ಬೀಜಗಳು, ಕೃಷಿ ಪರಿಕರಗಳು ಇತ್ಯಾದಿಗಳು ಕೂಡ ಅತಿ ಹೆಚ್ಚು ಲಭ್ಯವಾಗುತ್ತಿರುವುದು ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಮೂಲಕವೇ. ಆದುದರಿಂದ ಇವುಗಳು ದುರ್ಬಲವಾಗದಿರುವಂತೆ ಮತ್ತು ಗ್ರಾಮೀಣ ಆರ್ಥಿಕತೆಗೆ ಅತಿ ಅಗತ್ಯ ಸಾಂಸ್ಥಿಕ ರಚನೆಯಾಗುವಂತೆ ಮಾಡುವುದು ಅತಿ ಮುಖ್ಯ.

ಅಂತಾರಾಷ್ಟ್ರೀಯ ಉದಾಹರಣೆಗಳು: ನಮ್ಮ ದೇಶದಲ್ಲಿ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳಿರುವಂತೆಯೇ ಪ್ರಪಂಚದ ಹಲವು ಅಭಿವೃದ್ಧಿ ಹೊಂದಿದ ಮತ್ತು ಹೊಂದುತ್ತಿರುವ ದೇಶಗಳಲ್ಲೂ ಕೃಷಿ ಕ್ಷೇತ್ರವು ಸಹಕಾರಿ ಸಂಘಗಳನ್ನು ಅವಲಂಬಿಸಿರುವುದನ್ನು ಕಾಣಬಹುದಾಗಿದೆ. ಏಶ್ಯಾ ಫೆಸಿಫಿಕ್ ಪ್ರದೇಶವನ್ನೇ ಗಮನಿಸಿದರೆ ಅಭಿವೃದ್ಧಿ ಹೊಂದಿದ ದೇಶಗಳಾದ ಜಪಾನ್ ಮತ್ತು ನ್ಯೂಝಿಲೆಂಡ್‌ಗಳಲ್ಲಿ ಕೃಷಿಗೆ ಸಂಬಂಧಿಸಿದ ಹಣಕಾಸಿನ ನೆರವು, ಕೃಷಿ ಪರಿಕರಗಳ ಪೂರೈಕೆ ಮತ್ತು ಕೃಷಿಕರಿಗೆ ಸುಲಭವಾಗಿ ದೊರೆಯುವಂತೆ ಸಹಕಾರಿ ಮಾದರಿಯ ಸರಕು ಸಾಗಣೆ ಮತ್ತು ಗೋದಾಮುಗಳು ಇವೆಲ್ಲಿ ಪ್ರಾಥಮಿಕ ಹಂತದ ಸಹಕಾರಿ ಸಂಘಗಳ ಮೂಲಕವೇ ನಡೆಯುತ್ತಿದೆ. ಇದರಿಂದಾಗಿಯೇ ಜಪಾನಿನಲ್ಲಿ 'ಜಪಾನ್ ಅಗ್ರಿಕಲ್ಚರ್ ಜೆಎ' ಒಂದು ದೊಡ್ಡ ಸಮೂಹ ಸಂಸ್ಥೆಯಾಗಿ ರೂಪುಗೊಂಡಿದೆ. ಹೀಗೆಯೇ ನ್ಯೂಝಿಲೆಂಡ್‌ನ 'ಫೋಂಟೇರಾ' ಕೂಡ ಜಗತ್ತಿನ ಅತಿ ದೊಡ್ಡ ಸಹಕಾರೀ ಸಮೂಹ ಸಂಸ್ಥೆಯಾಗಿ ಬೆಳೆದಿದೆ.

ಅಭಿವೃದ್ಧಿ ಹೊಂದುತ್ತಿರುವ ದೇಶಗಳಾದ ಇಂಡೋನೇಶ್ಯಾ ಮತ್ತು ವಿಯಟ್ನಾಂಗಳಲ್ಲಿ ಕೂಡ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಮೇಲೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಈ ದೇಶಗಳಲ್ಲೂ ನಮ್ಮ ದೇಶದಂತೆ ಸಹಕಾರಿ ಸಂಘಗಳ ವೈಫಲ್ಯಗಳು, ನಷ್ಟದಲ್ಲಿ ನಡೆಯುವುದು, ಹಲವಾರು ಸಹಕಾರಿ ಸಂಘಗಳಲ್ಲಿ ಆಡಳಿತ ವೈಫಲ್ಯ ಮುಂತಾದ ಘಟನೆಗಳು ನಡೆದಿವೆ. ಆದರೆ ಅಭಿವೃದ್ಧಿ ನೀತಿಯಲ್ಲಿ ಕೃಷಿ ಸಹಕಾರಿ ಸಂಘಗಳಿಗೆ ಆದ್ಯತೆ ಕಡಿಮೆಯಾಗಿಲ್ಲ. ಪಶ್ಚಿಮ ಏಶ್ಯಾದ ದೇಶಗಳಾದ ಇರಾನ್ ಮತ್ತು ಇಸ್ರೇಲ್‌ಗಳ ಉದಾಹರಣೆಗಳೂ ನಮ್ಮ ಮುಂದಿದೆ. ಇತ್ತೀಚೆಗೆ ಇರಾನ್ ತನ್ನ ಆಥಿಕತೆಯ ಶೇಕಡ 25ರಷ್ಟು ಸಹಕಾರಿ ಮಾದರಿಯಲ್ಲಿ ನಡೆಯುವುದನ್ನು ಸಾಧ್ಯವಾಗಿಸಬೇಕೆಂದು ಹೊಸ ಆರ್ಥಿಕ ನೀತಿಯನ್ನು ಜಾರಿಗೆ ತಂದಿದೆ. ಇಸ್ರೇಲ್ ಇನ್ನೂ ಒಂದು ಹೆಜ್ಜೆ ಮುಂದೆ ಸಾಗಿದ್ದು, ಕಿಬುತ್ಸ್‌ಗಳಂತಹ ಸಹಕಾರಿ ಸಮುದಾಯ ಪದ್ಧತಿಯನ್ನೇ ಜಗತ್ತಿಗೆ ಪರಿಚಯಿಸಿದೆ. ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಕುರಿತು ಚಿಂತಿಸುವಾಗ, ನೀತಿಗಳನ್ನು ರೂಪಿಸುವಾಗ ಈ ಎಲ್ಲವನ್ನೂ ನಾವು ಗಮನದಲ್ಲಿರಿಸಿಕೊಳ್ಳಬೇಕು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಅನನ್ಯತೆ: ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ಬೇರೆಲ್ಲ ಸಹಕಾರಿ ಸಂಘಟನೆಗಳಿಗಿಂತ ಭಿನ್ನವಾದ ಅನನ್ಯತೆಯನ್ನು (ಯೂನಿಕ್‌ನೆಸ್) ಹೊಂದಿವೆ. ದೇಶದ ಅತಿ ಹೆಚ್ಚಿನ ರೈತ ಸಮುದಾಯವು ಅನಕ್ಷರಸ್ಥರಾಗಿದ್ದು ಬ್ಯಾಂಕುಗಳಂಥ ಸಾಂಸ್ಥಿಕ ರಚನೆಗಳಿಗೆ ಹೋಗಲು ಹಿಂಜರಿಯುತ್ತಿದ್ದ ಕಾಲದಲ್ಲಿ ಸ್ಥಳೀಯ ಜನರಿಂದ, ಸ್ಥಳೀಯ ಜನರಿಗಾಗಿ, ಸ್ಥಳೀಯ ಅಗತ್ಯಗಳನುಸಾರ ಕೆಲಸ ನಿರ್ವಹಿಸಲಾರಂಭಿಸಿ, ಎಲ್ಲ ರೀತಿಯ ಜನರೂ ಯಾವುದೇ ಹಿಂಜರಿಕೆ ಇಲ್ಲದೆ ಸಹಾಯ ಪಡೆಯುವಂತೆ ಮಾಡಿದ ಸಂಸ್ಥೆಗಳು ಇವು. ಪತ್ತಿನ ಸಹಕಾರಿ ಸಂಘಗಳೆಂದು ಹೆಸರು ಹೊಂದಿದ್ದರೂ ಸಹ, ಕೇವಲ ಹಣಕಾಸಿನ ಅಗತ್ಯಗಳ ಪೂರೈಕೆಗೆ ಸೀಮಿತವಾಗದೆ ಎಲ್ಲ ಬಗೆಯ ಕೃಷಿ ಅಗತ್ಯಗಳೂ ದೊರೆಯುವ ಏಕ ಗವಾಕ್ಷಿಯಾಗಿ ಕಾರ್ಯ ನಿರ್ವಹಿಸುತ್ತಿರುವುದು ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳ ಇನ್ನೊಂದು ಹೆಗ್ಗಳಿಕೆ.

ಕಳೆದ ಹಲವು ದಶಕಗಳಲ್ಲಿ ಆಗಾಗ್ಗೆ ನಡೆದಿರುವ ಅಧ್ಯಯನಗಳ ಫಲಿತಾಂಶಗಳ ಪ್ರಕಾರ ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು ಪೂರ್ಣ ಪ್ರಮಾಣದಲ್ಲಿ ಸ್ಥಿರತೆ ಸಾಧಿಸಿಲ್ಲವಾದರೂ, ಹಲವು ನ್ಯೂನತೆಗಳನ್ನು ಹೊಂದಿದ್ದರೂ, ಸಾಧಾರಣ ಗ್ರಾಮೀಣ ಸಮುದಾಗಕ್ಕೆ ಇಂದಿಗೂ ಅವು ಅತ್ಮೀಯವಾದ ಸಂಸ್ಥೆಗಳು ಮತ್ತು ಅವುಗಳಿಗೆ ಪರ್ಯಾಯವಾದ ಯಾವುದೇ ಸಾಂಸ್ಥಿಕ ರಚನೆಗಳು ಇಂದಿಗೂ ದೇಶದಲ್ಲಿ ಲಭ್ಯವಿಲ್ಲ. ಹಲವು

ದಶಗಳ ಹಿಂದೆಯೇ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಿ ಅವುಗಳು ಗ್ರಾಮೀಣ ಪ್ರದೇಶದಲ್ಲಿ ಕಡ್ಡಾಯವಾಗಿ ಶಾಖೆಗಳನ್ನು ತೆರೆಯಬೇಕೆಂದೂ, ಕೃಷಿಕರಿಗೆ ಎಲ್ಲ ರೀತಿಯ ಹಣಕಾಸಿನ ಅತ್ಯಗಳನ್ನು ನೀಡಬೇಕೆಂದೂ ಸರಕಾರವು ವಿಧಿಸಿದರೂ ಕೂಡ ಬ್ಯಾಂಕುಗಳಿಂದ ಈ ಜವಾಬ್ದಾರಿಯನ್ನು ನಿರ್ವಹಿಸುವುದು ಸಾಧ್ಯವಾಗಲಿಲ್ಲ. ಹಾಗೆಯೇ ಹಾಗೆಯೇ ಪ್ರಾಂತೀಯ ಗ್ರಾಮೀಣ ಬ್ಯಾಂಕುಗಳು (ರೀಜನಲ್ ರೂರಲ್ ಬ್ಯಾಂಕ್ಸ್) ಕೂಡ ಕೃಷಿಕರು ಮತ್ತು ಗ್ರಾಮೀಣ ಜನತೆಗೆ ನಿರೀಕ್ಷಿತ ಸಹಾಯ ನೀಡುವುದು ಸಾಧ್ಯವಾಗಿಲ್ಲ. ಕಳೆದ ಎರಡು ಮೂರು ದಶಕಗಳಲ್ಲಿ 'ಕಿರು ಹಣಕಾಸು ಸಂಸ್ಥೆಗಳು (ಮೈಕ್ರೋ ಫೈನಾನ್ಸ್ ಇನ್‌ಸ್ಟಿಟ್ಯೂಶನ್ಸ್‌ಗಳು) ದೊಡ್ಡ ಮಟ್ಟದಲ್ಲಿ ಬೆಳೆದು ಬಂದಿದ್ದರೂ ಅವುಗಳು ಕೃಷಿಯೇತರ ಸಾಲ ನೀಡಿಕೆಗೆ ಮಾತ್ರವೇ ಸೀಮಿತವಾಗಿರುವುದನ್ನು ಕಾಣುತ್ತೇವೆ. ಹೀಗಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಅನನ್ಯತೆಯನ್ನು ಅರಿತು ಅವುಗಳನ್ನು ಸಬಲಗೊಳಿಸುವುದು ಇಂದಿನ ಅಗತ್ಯವಾಗಿದೆ.

ಕಾರ್ಯತಂತ್ರಗಳು: ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ಉತ್ತಮವಾಗಿ ಕಾರ್ಯ ನಿರ್ವಹಿಸುವಂತೆ ಮಾಡಬೇಕಾದರೆ ಹಲವು ಉಪಕ್ರಮಗಳ ಅಗತ್ಯವಿದೆ. ಇದನ್ನು ಪ್ರತಿ ಸಹಕಾರಿ ಸಂಘಗಳ ಚುನಾಯಿತ ಪ್ರತಿನಿದಿಗಳು ಮತ್ತು ಆಡಳಿತ ಮಂಡಳಿಗಳು ಗಮನಿಸಿ ಅದರಂತೆ ಕಾರ್ಯ ತಂತ್ರಗಳನ್ನು ರೂಪಿಸಬೇಕಿದೆ. ಈ ದಿಸೆಯಲ್ಲಿ ಕೆಳಗಿ ನೀಡಿರುವ ಕೆಲವು ಸಲಹೆಗಳನ್ನು ಚಾಲ್ತಿಗೆ ತರಲು ಪ್ರಯತ್ನಿಸಬಹುದು.

1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ಕೇವಲ ಪತ್ತಿನ ವ್ಯವಹಾರವನ್ನು ಮಾತ್ರ ಅವಲಂಬಿಸದೆ ಕೃಷಿಕರ ಎಲ್ಲ ಬಗೆಯ ಅಗತ್ಯಗಳನ್ನು ತಮ್ಮ ವ್ಯವಹಾರದ ಭಾಗವಾಗಿ ಪರಿಗಣಿಸಿ ಅದರಂತೆ ವ್ಯವಹಾರ ಚಟುವಟಿಕೆಗಳನ್ನು ಸಂಘಟಿಸಬೇಕು

2. ವೃತ್ತಿಪರ ಆಡಳಿತ ಅತಿ ಮುಖ್ಯ. ಆಡಳಿತ ಮಂಡಳಿ ಸದಸ್ಯರು ತಮ್ಮ ಜವಾಬ್ದಾರಿಯನ್ನು ಅರಿತು, ಸಂಘದ ವ್ಯವಸ್ಥಾಪನೆಗೆ ಅಗತ್ಯವಾದ ತರಬೇತಿಯನ್ನು ಪಡೆದು ಸಂಘದ ಚಟುವಟಿಕೆಗಳನ್ನು ಸಂಘಟಿಸ ಬೇಕು. ಪ್ರತಿ ನಿರ್ದೇಶಕರೂ ಒಂದಾದರೂ ಜವಾಬ್ದಾರಿಯನ್ನು ವಹಿಸಿಕೊಂಡು ನಿರ್ವಹಿಸಬೇಕು. ಹೀಗೆಯೇ ಸಿಬ್ಬಂದಿ ಕೂಡ ಅಗತ್ಯ ತರಬೇತಿ ಪಡೆದು, ಪರಿಣಿತಿ ಹೊಂದಿ ವೃತ್ತಿಪರತೆಯನ್ನು ಮೈಗೂಡಿಸಿಕೊಳ್ಳಬೇಕು.

3. ರಾಜಕೀಯ ತಟಸ್ಥತೆ ಎಲ್ಲ ಬಗೆಯ ಸಹಕಾರಿ ಸಂಘಗಳಿಗೂ ಅತಿ ಮುಖ್ಯ. ಅಂದರೆ ಯಾವುದೇ ರಾಜಕೀಯ ಪಕ್ಷವನ್ನು ಪ್ರತಿನಿಧಿಸದೆ, ಆಡಳಿತ ಮಂಡಳಿಯ ಎಲ್ಲರೂ ಸಹಕಾರ ಸಂಘವನ್ನು ಗಟ್ಟಿಗೊಳಿಸುವುದು ಮತ್ತು ಎಲ್ಲ ಸದಸ್ಯರ ಅಗತ್ಯಗಳನ್ನು ಪೂರೈಸುವುದು ಅಗತ್ಯವೆನ್ನುವುದನ್ನು ಮನಗಾಣಬೇಕು.

4. ಆದಷ್ಟೂ ಸ್ಥಳೀಯ ಸಂಪನ್ಮೂಲಗಳನ್ನೇ ಬಳಸಬೇಕು ಮತ್ತು ಸ್ಥಳೀಯ ಬ್ರಾಂಡ್‌ಗಳ ಅಭಿವೃದ್ಧಿಗೆ ಪ್ರಯತ್ನಿಸಬೇಕು.

5. ಸದಸ್ಯರು ಹೆಚ್ಚು ಸಕ್ರಿಯವಾಗಿ ಭಾಗವಹಿಸಲು ಅನುವಾಗುವಂತೆ ಆಗಾಗ್ಗೆ ಸಂಘದ ಹಂತದಲ್ಲಿಯೇ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು

6. ಸುಸ್ಥಿರ ಅಭಿವೃದ್ಧಿ ಇಂದನ ಪ್ರಮುಖ ಅಗತ್ಯ. ಆದುದರಿಂದ ಪರಿಸರ ಸ್ನೇಹಿ ಮಾರ್ಗಗಳ ಅನುಸರಣೆ, ಅನಗತ್ಯ ವೆಚ್ಚಗಳನ್ನು ಮಾಡದಿರುವುದು, ಸದಸ್ಯರ ಅಗತ್ಯಗಳನ್ನೆ ವ್ಯವಹಾರ ಚಟುವಟಿಕೆಗಳಾಗಿ ಪರಿವರ್ತಿಸುವುದು, ಸ್ಥಳೀಯ ಸಾಮಗ್ರಿಗಳಿಗೆ ಮೌಲ್ಯ ವರ್ಧನೆ ಮಾಡಿ ಮಾರಾಟ ಮಾಡುವುದು ಸಾಧ್ಯವಾಗುವಂತಹ ಕಾರ್ಯಕ್ರಮಗಳನ್ನು ರೂಪಿಸುವುದು ಮುಂತಾದುವುಗಳನ್ನು ಚಾಲ್ತಿಗೆ ತರಬೇಕು.

7. ತಂತ್ರಜ್ಞಾನದ ಅಳವಡಿಕೆ ಅತಿ ಅಗತ್ಯ. ಇದು ಕಾರ್ಯ ಕ್ಷಮತೆಯನ್ನು ಹೆಚ್ಚಿಸುವುದರ ಜೊತೆಗೆ ಒಟ್ಟಾರೆ ಹಣಕಾಸಿನ ಶಿಸ್ತಿಗೂ ಕಾರಣವಾಗುತ್ತದೆ.

ದೇಶದ ಕೃಷಿ ಕ್ಷೇತ್ರದ ಇಂದಿನ ಪರಿಸ್ಥಿತಿಯನ್ನು ಗಮನಿಸಿದಾಗ ತಳಮಟ್ಟದ ಸಹಾಯ ಸಂಸ್ಥೆಗಳು ಕೃಷಿಕರಿಗೆ ಅನಿವಾರ್ಯವೆನ್ನುವುದು ಸ್ಪಷ್ಟವಾಗುತ್ತದೆ. ಇದಕ್ಕೆ ಹೊಸ ಸಂಸ್ಥೆಗಳನ್ನು ಹುಟ್ಟುಹಾಕುವುದಕ್ಕಿಂತ ಲಬ್ಯವಿರುವ ಸಂಸ್ಥೆಗಳ ಸಾಮರ್ಥ್ಯ ವೃದ್ಧಿಗೊಳಿಸುವುದೇ ಸರಿಯಾದ ಮಾರ್ಗ. ಕೃಷಿಕರಿಗೆ ಮತ್ತು ಗ್ರಾಮೀಣ ಜನತೆಗೆ ದೀರ್ಘ ಕಾಲದಿಂದ ಲಭ್ಯವಿರುವ, ಚಿರಪರಿಚಿತವಾಗಿರುವ, ಹಲವು ವಿಪ್ಲವಗಳ ಸಂದರ್ಭದಲ್ಲೂ ಗಟ್ಟಿಯಾಗಿ ನಿಂತು ಕೃಷಿಕರಿಗೆ ಸಹಾಯ ನೀಡುತ್ತ ಬಂದಿರುವ,

ಸರಕಾರವು ಇಂದು ಹೇಳುತ್ತಿರುವ 'ಸ್ಥಳೀಯತೆಯನ್ನು ಜಾಗತಿಕಗೊಳಿಸುವಲ್ಲಿ' (ಮೇಕಿಂಗ್ ಲೋಕಲ್ ಇನ್‌ಟು ಗ್ಲೋಬಲ್) ಪ್ರಮುಖ ಪಾತ್ರ ನಿರ್ವಹಿಸುವ ಸಾಮರ್ಥ್ಯವಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳನ್ನು ಶಕ್ತಿಯುತಗೊಳಿಸಿದರೆ ಅವುಗಳು ಗ್ರಾಮೀಣ ಆರ್ಥಿಕ ಸ್ಥಿರತೆಗೆ ಊರುಗೋಲಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

******

## ಡೋಂಗ್ರೆಯವರ ಪರಿಚಯ


ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಾಣಿಜ್ಯ ಶಾಸ್ತ್ರ ಪ್ರಾಧ್ಯಾಪಕರಾಗಿದ್ದು ನಿವೃತ್ತರಾಗಿರುವ ಯಶವಂತ ಡೋಂಗ್ರೆಯವರು ಕಳೆದ ಮೂರು ದಶಕಗಳಿಂದ ಸಹಕಾರಿ ಕ್ಷೇತ್ರದ ಕುರಿತಂತೆ ಸಂಶೋಧನೆ, ಬೋಧನೆ ಮತ್ತು ತರಬೇತಿ ಕಾರ್ಯಗಳಲ್ಲಿ ತಮ್ಮನ್ನೂ ತೊಡಗಿಸಿಕೊಂಡಿರುವರು. ಹಾಸನದಲ್ಲಿರು ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ, ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿ ಜವಾಬ್ದಾರಿ ನಿರ್ವಹಿಸಿರುವ ಡೋಂಗ್ರೆಯವರು ಏಶ್ಯಾ ಫೆಸಿಫಿಕ್ ವಲಯದ ಹಲವಾರು ದೇಶಗಳಲ್ಲಿ ಸಂಶೋಧನೆ, ಬೋಧನೆ ಮತ್ತು ಪ್ರಬಂಧ ಮಂಡನೆಗಳನ್ನು ಮಾಡಿದ್ದಾರೆ. ಜಪಾನಿನ ರಿಟ್ಸುಮೇಕನ್ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಸಂಶೋದನೆ ನಡೆಸಿರುವ (1992, 2000) ಇವರು, ಗ್ರಾಜುಯೇಟ್ ಯುನಿವರ್ಸಿಟಿ ಫಾರ್ ಅಡ್ವಾನ್ಸ್ಡ್ ಸ್ಟಡೀಸ್, ಓಸಕ, ಜಪಾನ್ ಇಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ (2008–09) ಮತ್ತು ಟೋಕ್ಯೋ ವಿಶ್ವವಿದ್ಯಾನಿಲಯದಲ್ಲಿ ಜಪಾನ್ ಫೌಂಡೇಶನ್ ಫೆಲೋ ಆಗಿ (2013–14) ಕೆಲಸ ನಿರ್ವಹಿಸಿರುತ್ತಾರೆ.

ಎಂಟು ಸಂಪಾದಿತ ಕೃತಿಗಳು ಮತ್ತು ನೂರಕ್ಕೂ ಹೆಚ್ಚು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿರುವ ಯಶವಂತ ಡೋಂಗ್ರೆಯವರು ಸಹಕಾರಿ ಕ್ಷೇತ್ರವನ್ನೂ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಕನ್ನಡ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ. ಭಾರತ ಸರಕಾರದ ಕೃಷಿ ಮಂತ್ರಾಲಯವು ರಚಿಸಿದ ಸಹಕಾರಿ ಕ್ಷೇತ್ರದ ಬಗೆಗಿನ ಉನ್ನತ ಮಟ್ಟದ ಸಮಿತಿಗೆ ಸಲಹೆಗಾರರಾಗಿ, ಅಂತಾರಾಷ್ಟ್ರೀಯ ಸಹಕಾರಿ ಒಕ್ಕೂಟದ ಏಶ್ಯಾ ಫೆಸಿಫಿಕ್ ವಲಯದ ಸಂಶೋಧನಾ ಸಮಿತಿಯ ಸದಸ್ಯರಾಗಿ ಮತ್ತು ಶೈಕ್ಷಣಿಕ ಸಂಸ್ಥೆಗಳ ಸಹಕಾರಿ ಸಂಘಟನೆಗಳ ಸಮಿತಿಯ ಸಹ ಕಾರ್ಯದರ್ಶಿಯಾಗಿ ಹಲವು ಉಪಕ್ರಮಗಳನ್ನು ಜಾರಿಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಇವರು ಅಂತಾರಾಷ್ಟ್ರೀಯ ನೆಲೆಯಲ್ಲಿ ಸಹಕಾರಿ ಕ್ಷೇತ್ರದ ಕಾರ್ಯನಿರ್ವಹಣೆ ಮತ್ತು ಅಂತಾರಾಷ್ಟ್ರೀಯ ಆಗುಹೋಗುಗಳ ಬಗೆಗೆ ಆಳವಾದ ಅಧ್ಯಯನ ಮಾಡಿದವರಾಗಿದ್ದಾರೆ.

******



# ಮುಂಡಾಜೆ ಪಾಕ್ಸ್ ಶತಮಾನ
# ಪರಿಸರ–ಚಳವಳಿಯ ಬಗ್ಗೆ



❑ **ಕೆ. ಶ್ರೀಕರ ಭಟ್**
**ಮುಂಡಾಜೆ**

ಇದು ಸಮೃದ್ಧ, ಪ್ರಕೃತಿ ರಮ್ಯ ಪಶ್ಚಿಮ ಘಟ್ಟಗಳ ಸಹ್ಯಾದ್ರಿ ಒಡಲಿನಿಂದ ಜೀವಧಾರೆಯಾಗಿ, ಜೀವನ ಧಾರೆಯಾಗಿ ಹರಿಯುತ್ತಿರುಡ ನೇತ್ರಾವತಿ– ಮೃತ್ಯುಂಜಯಾ ನದಿಗಳ ತೀರದಲ್ಲಿ ಸಂಭವಿಸಿದ ವಿದ್ಯಮಾನ.

ಪರಶುರಾಮ ಸೃಷ್ಟಿಯ ತಪಸ್ಸು, ಸಾಹಸ, ಪರಿಶ್ರಮಗಳ ಹಿನ್ನಲೆಯಲ್ಲಿ ನೂರಾರು ಮಂದಿ ರೈತರು, ಕೃಷಿಕರು, ಋಷಿ ಸದೃಶ ಸಹಕಾರಿ ಬಂಧುಗಳು ನೂರು ವರ್ಷಗಳ ಕಾಲ ನಡೆಸಿದ ಸಾಹಸಗಾಥೆ. ಭಗೀರಥನ ಸಹಸ್ರ ಸಹಸ್ರ ವರ್ಷಗಳ ತಪಸ್ಸನ್ನು, ಸಾವಿರ ಸಾವಿರ ವರ್ಷ ಭೂಮಿಯನ್ನು ಅಗೆದ ಅರವತ್ತು ಸಾವಿರ ಸಗರ ಪುತ್ರರ ಕಥಾನಕವನ್ನು ಹೋಲಿಕೆಯಲ್ಲವಾದರೂ ಒಂದು ಕ್ಷಣಕ್ಕಾದರೂ ನೆನಪಿಗೆ ತರುವ ಸಂಗತಿ.

ಜೀವನೋಪಾಯಕ್ಕೆ ಕೃಷಿಯೊಂದನ್ನೇ ಅವಲಂಬಿಸಿದ್ದ ರೈತರು ಬಿತ್ತಿದ ಸಹಕಾರ ತತ್ವದ ಬೀಜ ಸತತವಾಗಿ ಸುರಿಯುವ ವರ್ಷಧಾರೆಯಲ್ಲಿ ಮಿಂದೆದ್ದು ಕುಡಿಯೊಡೆದು ಚಿಗುರಿ ಹೆಮ್ಮರವಾಗಿ ಬೆಳೆದು ನಾಲ್ದೆಸೆಗಳಿಗೆ ಹಬ್ಬಿ ಸಾವಿರಾರು ಮಂದಿಗೆ ಬದುಕಿನಲ್ಲಿ ಭರವಸೆ ಮೂಡಿಸಿದ ಅಘೋಷಿತ ಕ್ರಾಂತಿಯ ಒಂದು ಪುಟ್ಟ ವೃತ್ತಾಂತ. ಇದು ಗ್ರಾಮೀಣ ಪ್ರದೇಶದ ಸಹಕಾರ ಚಳವಳಿಯ ಒಂದು ಮಾದರಿಯೂ ಹೌದು. ಅದು ಬದುಕಿನ ಅಸಹಾಯಕತೆ, ಸಂಕಟ, ಹತಾಶೆಗಳ ನಡುವೆ ಬೆಳಗಿದ ಜೀವನೋತ್ಸಾಹದ ಪ್ರತೀಕ.

ಸ್ವಾತಂತ್ರ್ಯಪೂರ್ವದ ಅಂದಿನ ಕಠಿಣ ದಿನಗಳಲ್ಲಿ ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಸಹಕಾರಿ ಸಂಘವೊಂದನ್ನು ಹುಟ್ಟು ಹಾಕುವುದು ಮೇಲ್ನೋಟಕ್ಕೆ ಕಾಣುವಷ್ಟು ಸರಳವಾಗಿರಲಿಲ್ಲ. ರೈತರನ್ನು ಸಂಧಿಸಬೇಕು, ಅಡಿಗಡಿಗೆ ಅವರನ್ನು ಹುರಿದುಂಬಿಸಬೇಕು, ಸಹಕಾರಿ ಚಳುವಳಿಯ ಅಗತ್ಯ ಮತ್ತು ಪ್ರಯೋಜನಗಳನ್ನು ಅವರಿಗೆ ತಿಳಿಯ ಹೇಳಬೇಕು ಮತ್ತೆ ಮತ್ತೆ ಅದನ್ನು ಅವರಿಗೆ ಮನವರಿಕೆ ಮಾಡಿಕೊಡಬೇಕು, ಪಟ್ಟಭದ್ರರ, ಸ್ಥಾಪಿತ ಹಿತಾಸಕ್ತಿಗಳ ನಡುವೆ ಅವರನ್ನು ಸಂಘಟಿಸುವುದು ಸುಲಭವಾಗಿರಲಿಲ್ಲ. ಕಾಡುವ ಬಡತನದ ಮಧ್ಯೆ ಹಣಕಾಸಿನ ಅನುಕೂಲ, ಈಗಿನಂತೆ ಸಂಚಾರ – ಸಂಪರ್ಕ – ಸೌಕರ್ಯಗಳೊಂದೂ ಇಲ್ಲದ ದಿನಗಳಲ್ಲಿ ಅದೆಂಥಾ ಪರಿಶ್ರಮದಿಂದ ಅವುಗಳನ್ನು ಕಟ್ಟಿರಬೇಕು? ಅಮಾಯಕ ರೈತರಿಗೆ ತಮ್ಮ ಸಮಸ್ಯೆ ಏನೆಂಬುದೇ ತಿಳಿಯದಿದ್ದ ದಿನಗಳವು ಪ್ರಾಮಾಣಿಕತೆಯ ಕೊರತೆ ಇರಲಿಲ್ಲ. ವ್ಯವಹಾರ ಕೌಶಲ ಕಡಿಮೆ. ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯಾವ ಕಾರಣಕ್ಕೂ ನಂಬಿಕೆ ದ್ರೋಹವಾಗದಂತೆ ಸಹಕಾರಿ ಸಂಘಗಳನ್ನು ಅಚ್ಚುಕಟ್ಟಾಗಿ ಶಿಸ್ತುಬದ್ಧವಾಗಿ ನಿರ್ವಹಿಸುವ ಹೊಣೆ ಸಣ್ಣದಾಗಿರಲಿಲ್ಲ. ಒಂದೊಂದು ರೂಪಾಯಿ ಸೇರಿಸುವುದೂ ಒಂದು ಸವಾಲು. ಸಹಕಾರಿಗಳ ಪ್ರಾಮಾಣಿಕತೆ, ಪರಿಶ್ರಮ

ನಿರ್ವಂಚನೆಯ ಕಾರ್ಯತತ್ಪರತೆಗಳೇ ಸಹಕಾರಿ ರಂಗವನ್ನು ಈ ಮಟ್ಟಕ್ಕೆ ಬೆಳೆಸಿ ತಂದಿದೆ ಎಂದು ಹೇಳಿದರೆ ಅದು ಯಾವ ಕಾರಣಕ್ಕೂ ಅತಿಶಯೋಕ್ತಿಯಲ್ಲ. ಬಂಡವಾಳ ಶಾಹಿ ಪ್ರಾಬಲ್ಯ ಅರ್ಥವ್ಯವಸ್ಥೆಯಲ್ಲಿ ಮಧ್ಯವರ್ತಿಗಳು ಮತ್ತು ಲೇವಾದೇವಿದಾರದಿಂದ ನಡೆಯುತ್ತಿದ್ದ ಶೋಷಣೆಯಿಂದ ಮುಕ್ತರಾಗಿ ರೈತರು ನಿರಾಳವಾಗಿ ತಮ್ಮ ದೈನಂದಿನ ಬದುಕನ್ನು ನಿರ್ವಹಿಸಲು ಸಾಧ್ಯವಾದುದು ಸಣ್ಣ ಸಂಗತಿಯಲ್ಲ.

ಒಟ್ಟಾರೆಯಾಗಿ ಸಹಕಾರ ಸಂಘಗಳು ಗ್ರಾಮಗಳಲ್ಲಿ ಪ್ರಜಾಸತ್ತಾತ್ಮಕ ತತ್ವ ಸಿದ್ಧಾಂತಗಳಿಗೆ ಅನುಗುಣವಾಗಿ ಒಂದು ಅರೋಗ್ಯಪೂರ್ಣ ಅರ್ಥವ್ಯವಸ್ಥೆಯನ್ನು ಕಲ್ಪಿಸಿವೆ. ಅವು ರೈತರ ಬದುಕಿಗೆ ಆರ್ಥಿಕ ಸ್ಥಿರತೆ – ಭದ್ರತೆಯನ್ನು ಒದಗಿಸಿವೆ. ಅವುಗಳಿಂದ ರೈತರಲ್ಲಿ ಆತ್ಮಗೌರವ ವರ್ಧಿಸಿದೆ. ಸ್ವಾವಲಂಬನೆಯ ಪಾಠವನ್ನೂ ಅವು ಕಲಿಸಿವೆ. ಗ್ರಾಮೀಣ ರೈತ ಸಮುದಾಯದಲ್ಲಿ ಪರೋಕ್ಷವಾಗಿ ಸಾಮಾಜಿಕ ಎಚ್ಚರವನ್ನು ಮೂಡಿಸಿ ಅವರಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಮೊಳೆಸಿ ನಾಯಕತ್ವವನ್ನು ಬೆಳೆಸಿ ತರುವಲ್ಲೂ ಸಹಕಾರ ಚಳುವಳಿ

ಸಹಕಾರಿಯಾಗಿರುವುದನ್ನು ನಾವಿಂದು ಸ್ಪಷ್ಟವಾಗಿ ಕಾಣುತ್ತಿದ್ದೇವೆ. ಸಹಕಾರಿ ಕ್ಷೇತ್ರ ಎಲ್ಲ ದೃಷ್ಟಿಯಿಂದಲೂ ಸಮಾಜಪರ ಚಿಂತನೆಯ ಪಾಠಶಾಲೆಯಂತಿದೆ.

ಸಮಾನತೆ, ಪರಸ್ಪರ ನಂಬಿಕೆ, ಸಹಯೋಗ, ಸಮಷ್ಟಿ, ಹಿತ ಸಂರಕ್ಷರಣೆ ಸಹಕಾರ ಚಳುವಳಿಯ ತಿರುಳು. ಜನತಂತ್ರದ ಆಶಯ, ಪ್ರಗತಿಪರ ಚಿಂತನೆಯ ತತ್ವ ಸ್ವಾವಲಂಬನದ ಸೂತ್ರ ಅದರ ತಳಹದಿ.

ಸಹಕಾರ ಚಳುವಳಿ ಇಂದು ಕೃಷಿ, ಕೈಗಾರಿಕೆ, ಪಶುಸಂಗೋಪನೆ – ಹೈನುಗಾರಿಕೆ, ಮೀನುಗಾರಿಕೆ, ಗೃಹ ನಿರ್ಮಾಣ, ವಾಣಿಜ್ಯೋದ್ಯಮ, ಬ್ಯಾಂಕಿಂಗ್, ಕರಕುಶಲ ವಸ್ತುಗಳ ಉದ್ದಿಮೆ ಮತ್ತಿತರ ಆರ್ಥಿಕ ವಲಯಗಳಿಗೆ ವಿಸ್ತರಿಸಿದೆ. ಶಿಕ್ಷಣ, ಆರೋಗ್ಯ, ಗ್ರಾಹಕ ಹಿತರಕ್ಷಣೆ ಮುಂತಾದ ಕ್ಷೇತ್ರಗಳಲ್ಲೂ ಅದು ಸಕ್ರಿಯ ಗ್ರಾಮೀಣ ಅಭಿವೃದ್ಧಿ ಮತ್ತು ಪ್ರಗತಿ ಸಾಧನೆಯ ಮಾಧ್ಯಮವಾಗಿ ಅದು ರಾಷ್ಟ್ರದ ಅಭ್ಯುದಯಕ್ಕೆ ಸಹಾಯಕ. ಹಳ್ಳಿ ಹಳ್ಳಿಗಳಲ್ಲೂ ದೇಹದ ನರಮಂಡಲದಂತೆ, ರಕ್ತನಾಳಗಳಂತೆ ಸಹಕಾರ ಸಂಘಗಳು ಇಂದು ಕಾರ್ಯ ನಿರ್ವಹಿಸುತ್ತಿವೆ. ಅವು ಇಂದು ಗ್ರಾಮಾಂತರದ ಅರ್ಥವ್ಯವಸ್ಥೆಯ ಜೀವನಾಡಿಗಳಾಗಿವೆ.

ದೇಶದಲ್ಲಿ ಇಂದು ಅಸ್ತಿತ್ವದಲ್ಲಿರುವ ಸಹಕಾರಿ ಸಂಘಗಳ ಸಂಖ್ಯೆ ಎಂಟು ಲಕ್ಷಕ್ಕೂ ಹೆಚ್ಚು. ಇವುಗಳಲ್ಲಿ ವಿವಿಧೋದ್ದೇಶ ಸಹಕಾರ ಸಂಘಗಳೂ ಸೇರಿವೆ. ಸಹಕಾರಿ ಕ್ಷೇತ್ರದ ಸದಸ್ಯರ ಸಂಖ್ಯೆ ಮೂವತ್ತು ಕೋಟಿ. ಸಕ್ಕರೆ, ಗೋಧಿ, ರಸಗೊಬ್ಬರ ಉತ್ಪಾದನೆಯಲ್ಲಿ ಅದು ಅಗ್ರಗಾಮಿಯಾಗಿದ್ದು ಗಮನಾರ್ಹ ಪ್ರಗತಿ ಸಾಧಿಸಿದೆ.

ರಾಜ್ಯದಲ್ಲಿ 46000 ಸಹಕಾರಿ ಸಂಘಗಳಿದ್ದು ಅವು 2.5 ಕೋಟಿ ಸದಸ್ಯಬಲವನ್ನು ಹೊಂದಿವೆ. ಅವುಗಳ ದುಡಿಯುವ ಬಂಡವಾಳ 1,09,666 ಕೋಟಿ ರೂಪಾಯಿ. ಠೇವಣಿ ಸಂಚಯ 6420 ಕೋಟಿ ರೂಪಾಯಿ ಎಂಬುದು ನಂಬಲರ್ಹ ಮೂಲಗಳಿಂದ ಸಂಗ್ರಹಿಸಿದ ಮಾಹಿತಿ.

ಸಹಕಾರದ ಪರಿಕಲ್ಪನೆ ಇಂದು – ನಿನ್ನೆಯದಲ್ಲ ಅದು ಮಾನವ ಜೀವಿತದ ಮೂಲದ್ರವ್ಯ. ಮನುಷ್ಯ ಮೂಲತಃ ಸಂಘ ಜೀವಿ. ಇಂದು ನಮ್ಮ ಕಣ್ಣ ಮುಂದಿರುವ ಜಗತ್ತು ಪ್ರಗತಿ ಸಾಂಘಿಕ ಪರಿಶ್ರಮದ ಫಲಿತಾಂಶ. ಭಾರತೀಯ ವೈದಿಕ ಸಾಹಿತ್ಯ – ವಾಙ್ಮಯಗಳಲ್ಲೂ ಈ ಕುರಿತು ಉಲ್ಲೇಖಗಳು ನಮಗೆ ವಿಫುಲವಾಗಿ ದೊರೆಯುತ್ತವೆ. ಸಹಕಾರ ತತ್ವ ಭಾರತೀಯರ ಜೀವನ ವಿಧಾನದಲ್ಲೇ ಅಂತರ್ಗತವಾಗಿರುವುದನ್ನು ನಮ್ಮ ಇತಿಹಾಸ ದಾಖಲಿಸಿದೆ. ಸಹಕಾರ ತತ್ವ ಸಮಾನತೆ ಮೂಲಮಂತ್ರ ಎನ್ನುವುದನ್ನು ಜಗತ್ತು ಒಪ್ಪಿಕೊಂಡಿದೆ, ಅದೀಗ ಪ್ರಚಲಿತ ವರ್ತಮಾನ ಯುಗದ ಜೀವನ ಧರ್ಮ. “ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು” ಎಂದು ಸಾರುವ ಸಮಾಜವಾದಿ ಸಿದ್ಧಾಂತದ ಮೂಲ ಆಶಯವೂ ಅದೇ ತಾನೇ? ಎಲ್ಲರಿಗೂ ಸಮಾನತೆ ಮತ್ತು ಸಮಾನ ನ್ಯಾಯವನ್ನು ನೀಡುವ ನಮ್ಮ ಆಧುನಿಕ ಪ್ರಜಾಪ್ರಭುತ್ವ ವ್ಯವಸ್ಥೆಯ ಸಾರಾಂಶವೂ ಅದೇ ಅಲ್ಲವೇ?

ಸಾಂಘಿಕ ಪ್ರಯತ್ನ, ಪರಿಶ್ರಮದ ಮೂಲಕ ನಿರ್ದಿಷ್ಟ ಹಿತಾಸಕ್ತಿಗಳಿಗಾಗಿ ಶಿಸ್ತುಬದ್ಧ ಆರ್ಥಿಕ ಚೌಕಟ್ಟಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ನೀತಿ–ನಿಯಮಗಳಿಗೆ ಅನುಗುಣವಾಗಿ ಸಮೃದ್ಧಿಯ ಅಭ್ಯುದಯಕ್ಕಾಗಿ ಶ್ರಮಿಸುವುದೇ ಸಹಕಾರ ಚಳುವಳಿ.

ಯಾವುದೇ ಒಂದು ತತ್ವ, ಸಿದ್ಧಾಂತ ಎಷ್ಟೇ ಉದಾತ್ತವಾಗಿದ್ದರೂ, ಎಷ್ಟೇ ಉನ್ನತವಾಗಿದ್ದರೂ, ಅದು ಕಾರ್ಯ ರೂಪಕ್ಕೆ ಬರುವುದು ಅದರ ಪ್ರಾಮಾಣಿಕ ಅನುಷ್ಠಾನದಿಂದ ಅದರ ಸೂತ್ರದಾರರ ಸಮರ್ಥ ಮಾರ್ಗದರ್ಶನ ಮತ್ತು ಕಾರ್ಯಕರ್ತರ ಕಾರ್ಯ ಕ್ಷಮತೆಯಿಂದ. ಯಾವ ಕ್ಷೇತ್ರಕ್ಕಾದರೂ ದೂರದರ್ಶಿತ್ವದ ಧೋರಣೆ, ದಕ್ಷ ಆಡಳಿತ, ನಿರ್ವಹಣ ಕೌಶಲ ಅದಕ್ಕೆ ತಕ್ಕ ಸಿಬ್ಬಂದಿ, ಶಿಸ್ತು ಪಾಲನೆಯೇ ಮೂಲ ಬಂಡವಾಳ ಅದೇ ಯಶಸ್ವಿನ ಸೂತ್ರ ಇದು ಸಹಕಾರಿ ರಂಗಕ್ಕೂ ಹೊರತಲ್ಲ.

ಭಾರತದಲ್ಲಿ ಸಹಕಾರ ಕಾನೂನು ಅಸ್ತಿತ್ವಕ್ಕೆ ಬಂದು ಶತಮಾನವೇ ಸರಿದಿದೆ. ಆದರೂ ಅದು ಇನ್ನೂ ಪೂರ್ಣ ಪ್ರಮಾಣದಲ್ಲಿ ವಿಕಸನವನ್ನು ಕಂಡಿಲ್ಲ. ದೇಶದ ಜನಸಂಖ್ಯೆ, ಸಂಪನ್ಮೂಲಗಳಿಗೆ ಆರ್ಥಿಕ ಸಾಮರ್ಥ್ಯಕ್ಕೆ ತಕ್ಕಂತೆ ಅದು ವಿಸ್ತರಿಸಿಲ್ಲ ಎಂಬುದು ತಜ್ಞರ ಅಭಿಮತ. ಈಗಿನ ಸಹಕಾರಿಗಳೆಲ್ಲ ಇದನ್ನು ಸವಾಲಾಗಿ ಸ್ವೀಕರಿಸಿ ಮುಂದುವರಿದರೆ ಒಳಿತು.

ಮುಂಡಾಜೆ ಪಾಕ್ಸ್ ರೈತರಿಗೆ ಕೃಷಿ ಸಾಲ ನೀಡುವುದಕ್ಕಷ್ಟೆ ಸೀಮಿತವಾಗದೆ, ಕೃಷಿಕರು ಬೆಳೆದ ಕೃಷಿ ಉತ್ಪನ್ನಗಳ ಮಾರಾಟ ದಿನ ಬಳಕೆ ವಸ್ತುಗಳ ಸರಬರಾಜು, ರಸಗೊಬ್ಬರ, ಕೀಟನಾಶಕ ಕೃಷಿ ಪರಿಕರ ಸಲಕರಣೆ ಪೂರೈಕೆ ಮುಂತಾದ ಸೇವೆಗಳನ್ನು ನಡೆಸುತ್ತಾ ಬಂದಿದೆ. ಸಂಘದ ಬೆಳವಣಿಗೆ, ಅದರ ಸರ್ವತೋಮುಖ ಪ್ರಗತಿಗಾಗಿ ಶ್ರಮಿಸಿದ ಹಿರಿಯರಲ್ಲಿ ಶ್ರೀ ಜಿ. ಎನ್. ಭಿಡೆ, ಎಂ. ಎನ್. ಭಿಡೆ. ಶ್ರೀ ಆರ್. ಜಿ ಫಡ್ಕೆ (25 ವರ್ಷ ಅಧ್ಯಕ್ಷರು). ಶ್ರೀ ಹೆಚ್. ಎಸ್. ಖಾಡಿಲ್ಕರ್, ಶ್ರೀ ಜಿ. ವಿ. ಪಟವರ್ಧನ್, ಶ್ರೀ ಅರಳಿಕಟ್ಟೆ ಗಣಪತಿ ಭಟ್ ಪ್ರಮುಖರ ನಂತರದಲ್ಲಿ ಎಂ. ಜಿ. ಫಡ್ಕೆಯವರು ಸಂಸ್ಥೆಯ ಅಧ್ಯಕ್ಷರಾಗಿ ನಿಯುಕ್ತರಾದರು.

1973ರಲ್ಲಿ ಬ್ಯಾಂಕು ತನ್ನ ಸ್ವರ್ಣ ಮಹೋತ್ಸವವನ್ನು ಸಂಭ್ರಮದಿಂದ ಆಚರಿಸಿತು. ಸಂಸ್ಥೆಯ ಐವತ್ತು ವರ್ಷಗಳ ಹಾದಿ ಬಹುತೇಕ ಕಲ್ಲು–ಮುಳ್ಳುಗಳ ದಾರಿಯೆ ಆಗಿತ್ತು. ಮಲೆನಾಡಿನ ದುರ್ಗಮ ಪರಿಸರ, ಪ್ರತಿಕೂಲ ಪರಿಸ್ಥಿತಿಗಳು, ಸಂಜಾರ–ಸಂಪರ್ಕ ಸೌಲಭ್ಯಗಳ ಕೊರತೆ, ಬಡತನ, ಹಣಕಾಸಿನ ಸಮಸ್ಯೆಗಳ ಮಧ್ಯೆ ಸಂಸ್ಥೆ ಒಂದೊಂದು ಮೆಟ್ಟಿಲನ್ನು ಹಾದು ಸಹಕಾರಿ ರಂಗದಲ್ಲಿ ತನ್ನ ಅಸ್ತಿತ್ವವನ್ನು ತೊರಿಸಿಕೊಟ್ಟಿತು.

1973ರಲ್ಲಿ ಎಂ. ಜಿ ಫಡ್ಕೆ ಅವರು ಅಧ್ಯಕ್ಷಸ್ಥಾನದಿಂದ ನಿವೃತ್ತರಾಗಿ ತರುಣ ಪೀಳಿಗೆಗೆ ಅಧಿಕಾರ ಹಸ್ತಾಂತರಿಸಿದರು. ಈ ಹಂತದಲ್ಲಿ ಸಂಸ್ಥೆಯ ಅಧ್ಯಕ್ಷರಾಗಿ ಶ್ರೀ ಎನ್. ಎಸ್. ಗೋಖಲೆ ಅವರು ಅಧಿಕಾರ ವಹಿಸಿಕೊಂಡು ತಮ್ಮ ದಕ್ಷ–ಸಮರ್ಥ ನಾಯಕತ್ವದಿಂದ ಸದಸ್ಯರಲ್ಲಿ ಹೊಸ ಹುರುಪನ್ನು ತುಂಬಿಸಿದರು. ಶ್ರೀ ಗೋಖಲೆಯವರ ಪರಿಶುದ್ಧ ವ್ಯಕ್ತಿತ್ವ, ಸೌಜನ್ಯನಡವಳಿಕೆ, ವ್ಯವಹಾರ ಕೌಶಲ ಮತ್ತು ಸಂಘಟನಾ ಸಾಮರ್ಥ್ಯಕ್ಕೆ ಜನ ತಲೆದೂಗಿದರು. ಬ್ಯಾಂಕ್ ಮತ್ತಷ್ಟು ಪ್ರಗತಿಸಾಧಿಸಿತು.

1975–77ರ ಅವಧಿಗೆ ದಿ| ಪ್ರಕಾಶ ಹೆಬ್ಬಾರ್ ಅಧ್ಯಕ್ಷರಾದರು ಮುಂದೆ 1980ರಲ್ಲಿ ಶ್ರೀ ಎ. ಎಂ. ಭಿಡೆ ಪರಾರಿ ರಘುಪತಿ ಹೆಬ್ಬಾರ್ ಪರಾರಿ ವೆಂಕಟ್ರಮಣ ಹೆಬ್ಬಾರ್, ಶಶಿಧರ್ ಖಾಡಿಲ್ಕರ್, ಇವರು ಸಂಘವನ್ನು ಮುನ್ನಡೆಸಿದರು. 1983ರಲ್ಲಿ ಮುಂಡಾಜೆ ಸಿ. ಎ. ಬ್ಯಾಂಕ್ ತನ್ನ ವಜ್ರಮಹೋತ್ಸವ ಆಚರಿಸಿತು. ಇದೇ ಸಂದರ್ಭದಲ್ಲಿ ಕರೆಂಜೆಯಲ್ಲಿ ಹೊಸ ಶಾಖೆಯೊಂದನ್ನು ತೆರೆಯುವ ಮೂಲಕ ಈ ಸಂದರ್ಭದ ಸಂಭ್ರಮವನ್ನು ಇಮ್ಮಡಿಸಿತು.

ಕಳೆದ ಎಂಟು ವರ್ಷಗಳಿಂದ ಸಂಘವು ಸಾಲ ಮರುಪಾವತಿಯಲ್ಲಿ ಶೇಕಡಾ 100ರ ಸಾಧನೆಯನ್ನು ದಾಖಲಿಸಿದೆ. ಕೋವಿಡ್ ಸೋಂಕಿನ (2019–2020) ಸಾಲ ಮರುಪಾವತಿ 99.71ರ ಸಾಧನೆ ತೋರಿಸಿದೆ.

ಪ್ರಕೃತ ಯುವನಾಯಕ ಜನಾರ್ದನ ಗೌಡರ ಸಾರಥ್ಯದಲ್ಲಿ ಸಂಘ ಮುನ್ನಡೆಯುತ್ತಿದೆ.

ಶತಮಾನೋತ್ಸವದ ಈ ಪರ್ವ ಕಾಲದಲ್ಲಿ ಸಂಸ್ಥೆ ನಡೆದು ಬಂದ ದಾರಿಯನ್ನು ಒಮ್ಮೆ ಪುನರಾವಲೋಕನ ಮಾಡಿದರೆ, ಹೊಸ ಸ್ಫೂರ್ತಿ, ಹೊಸ ಭರವಸೆಗಳು ನಮ್ಮಲ್ಲಿ ಮೂಡಿಯಾವು.

### ಶ್ರೀಕರ ಭಟ್‌ರವರ ಪರಿಚಯ

ಶ್ರೀಕರ ಭಟ್ ಉಡುಪಿ ಜಿಲ್ಲಾ ಕಾರ್ಕಳ ತಾಲೂಕು ಈದು ಗ್ರಾಮದ ಕೊಪ್ಪಲದಲ್ಲಿ ಜನಿಸಿ ಸುಮಾರು ಐದು ದಶಕಗಳಷ್ಟು ಕರ್ನಾಟಕದ ಎಲ್ಲ ಪತ್ರಿಕೆಗಳ ವರದಿಗಾರರಾಗಿ, ಉಪ ಸಂಪಾದಕರಾಗಿ, ಸಂಪಾದಕೀಯ ವಿಭಾಗದಲ್ಲೂ ದುಡಿದು, ಅಂಕಣಕಾರರಾಗಿ ಬರೆದು, ಈ ಪೈಕಿ 1982ರಿಂದ ಸುಮಾರು 12 ವರ್ಷ ಸೋವಿಯತ್ ಒಕ್ಕೂಟದ ವಾರ್ತಾ ಇಲಾಖೆಯಲ್ಲೂ (ಚೆನ್ನೈ) ಭಾಷಾಂತಕಾರರಾಗಿಯೂ ಸಂಪಾದಕರಾಗಿಯೂ ದುಡಿದು ಪ್ರಕೃತ ದ.ಕ. ಜಿಲ್ಲೆ ಬೆಳ್ತಂಗಡಿ ತಾಲೂಕು ಮುಂಡಾಜೆಯ ಮಜಲಿನಲ್ಲಿ ನೆಲೆಯೂರಿದವರು ಈ ಕಾಲಘಟ್ಟದಲ್ಲಿ ಯಕ್ಷಗಾನ ಅರ್ಥಧಾರಿಯಾಗಿ, ಲೇಖಕರಾಗಿ, ವಿಮರ್ಶಕರಾಗಿಯೂ ಪ್ರಸಿದ್ಧರು ಆಕಾಶವಾಣಿ, ದೂರದರ್ಶನ, ಟಿ.ವಿ. ಚಾನೆಲ್‌ಗಳಲ್ಲೂ ಕಾರ್ಯಕ್ರಮ ನೀಡಿದ ಹಿರಿಮೆ ಶ್ರೀಕರ ಭಟ್ಟರದು ದೇರಾಜೆ ಸೀತಾರಾಮ ಭಟ್ಟರ ಕಟ್ಟಾ ಅಭಿಮಾನಿಯಾಗಿರುವ ಶ್ರೀಯುತರು ಸಂಸ್ಮರಣ ಸಮಿತಿ ಸ್ಥಾಪಿಸಿ ದೇರಾಜೆ ಪ್ರಶಸ್ತಿ ಹುಟ್ಟು ಹಾಕಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಇಂದು ಅವರ ಸಂಸ್ಮರಣೆಗಾಗಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದಾರೆ.

ಮದ್ರಾಸಿನಲ್ಲಿದ್ದ ಸಂದರ್ಭದಲ್ಲಿ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿಯೂ ದುಡಿದವರು ಕುಬಣೂರು ಬಾಲಕೃಷ್ಣ ರಾವ್, ದೇರಾಜೆ ಸೀತಾರಾಮಯ್ಯರವರ ಜನ್ಮ ಶತಮಾನೋತ್ಸವದ ಸಮಿತಿ ಸಂಚಾಲಕರಾಗಿಯೂ ಕಾರ್ಯಪ್ರವೃತ್ತಿ. ಎಡನೀರು ಮಠದ ಶ್ರೀ ಕೇಶವಾನಂದ ಭಾರತೀ ಪ್ರಶಸ್ತಿ, ಬನ್ನಂಜೆ ರಾಮಾಯಣ ಪತ್ರಿಕೋದ್ಯೋಗ ಪ್ರಶಸ್ತಿ ಕನ್ನಡ ಸಾಹಿತ್ಯ ಪರಿಷತ್ ಪ್ರಶಸ್ತಿ ಮುಂತಾದ ಹಲವು ಪ್ರಶಸ್ತಿಗಳಿಂದ ಪುರಸ್ಕೃತರು ಸಿಂಗಪೂರ್, ಮಲೇಷ್ಯಾ, ಥಾಯ್ಲೆಂಡ್, ಚೀನಾ ಹಾಂಕಾಂಗ್, ಓಮನ್, ದುಬೈ, ಬ್ರಿಟನ್, ಫ್ರಾನ್ಸ್, U.S.A. ಮುಂತಾದದೇಶಗಳಲ್ಲೂ ಸಂಚರಿಸಿ ಲೋಕಜ್ಞಾನ ಸಂಪಾದಿಸಿಕೊಂಡವರು.

******

# 'ಸಹಕಾರಿ ಚಳುವಳಿ' – ನಡೆದು ಬಂದ ದಾರಿ



❑ ರಾಧಾಕೃಷ್ಣ ಕೋಟೆ
ಕಳಂಜ ಸುಳ್ಯ ತಾಲೂಕು ದ.ಕ.

ಸಹಕಾರ ಮಾನವ ನಾಗರೀಕ ಪ್ರಪಂಚಕ್ಕೆ ಕಾಲಿಟ್ಟ ದಿನದಿಂದಲೇ ಆತನ ಜೀವನದ ಜತೆ ಸಾಗಿ ಬಂದಿದೆ.

"ತಾನು ಎಲ್ಲರಿಗಾಗಿ– ಎಲ್ಲರೂ ತನಗಾಗಿ" ಎಂಬ ಧ್ಯೇಯವಾಕ್ಯಕ್ಕನುಸರಿಸಿ 1844ರಲ್ಲಿ ಸಮಾಜವಾದಿ ನಾಯಕ ರಾಬರ್ಟ್ ಓವೆನ್ ನೇತೃತ್ವದಲ್ಲಿ 18 ಮಂದಿ ನೇಕಾರರು ಇಂಗ್ಲೇಂಡಿನ ರಾಕ್ ಡೇಲ್ ಪಟ್ಟಣದಲ್ಲಿ ಸಹಕಾರ ಮಳಿಗೆಯನ್ನು ಆರಂಭಿಸುವ ಮೂಲಕ ಸಂಘ ಸ್ವರೂಪಕ್ಕೆ ಚಾಲನೆ ದೊರೆಯಿತು.

ನಂತರ ಜರ್ಮನಿಯ ನಿವೃತ್ತ ಸೇನಾಧಿಕಾರಿ ರೈಫಿಸನ್ ಗ್ರಾಮೀಣ ಪ್ರದೇಶದ ಬಡವರ್ಗದವರ ಉಳಿತಾಯ– ಸಾಲದ ಅವಶ್ಯಕತೆ ಮನಗಂಡು ಸರಳಬಡ್ಡಿ– ಸುಲಭ ಮರುಪಾವತಿ ವಿಧಾನದಲ್ಲಿ– "ಕ್ರೆಡಿಟ್ ಯೂನಿಯನ್" ಸ್ಥಾಪಿಸಿದನು. ಇದು ಕೃಷಿ ಪತ್ತಿನ ವ್ಯವಸ್ಥೆಗೆ ನಾಂದಿಯಾಯಿತು.

1850ರಲ್ಲಿ ಜರ್ಮನಿಯ ಹರ್ಮನ್ ಷೂಲ್ಸ್ ಎಂಬಾತ ಡಿಲಿಟ್ಸ್ ಪಟ್ಟಣದಲ್ಲಿ ಬಡವರ್ಗಕ್ಕೆ ಆರ್ಥಿಕ ಸಹಾಯ ಒದಗಿಸುವ ಸಹಕಾರ ಸಂಘವನ್ನು ಸ್ಥಾಪಿಸಿ ಪಟ್ಟಣ ಸಹಕಾರಿ ಬ್ಯಾಂಕುಗಳ ಸ್ಥಾಪನೆಗೆ ಮೂಲವಾಯಿತು.

ಈ ರೀತಿ ಪ್ರಾರಂಭವಾದ ಸಮಾಜವಾದ– ಬಂಡವಾಳಶಾಹಿ ಮಧ್ಯದ ಸುವರ್ಣ ಆರ್ಥಿಕದಾರಿ ಸಹಕಾರ ಚಳವಳಿ ವಿಶ್ವದಾದ್ಯಂತ 19ನೇ ಶತಮಾನದ ಅಂತ್ಯಕ್ಕೆ ಪಸರಿಸಿತು. ಸಹಕಾರಿ ಚಳುವಳಿಗೆ ಪ್ರಭಾವ ಬೀರಲು ಹಾಗೂ ಚಳವಳಿಯ ಮುಖಂಡತ್ವ ಮತ್ತು ಮಾರ್ಗದರ್ಶನ ನೀಡಲು1895ರಲ್ಲಿ ಅಂತರಾಷ್ಟ್ರೀಯ ಸಹಕಾರಿ ಮೈತ್ರಿಕೂಟ(ಐ ಅ ಂ) ರಚನೆಯಾಯಿತು.

ಭಾರತದಲ್ಲಿ ಸಹಕಾರ ಚಳುವಳಿ

ಭಾರತದಲ್ಲಿ 19ನೇ ಶತಮಾನದ ಅಂತ್ಯದಲ್ಲಿ ಅಂದಿನ ಬ್ರಿಟಿಷ್ ಸರಕಾರ ದೇಶದ ಕೃಷಿ ಪ್ರಗತಿಗಾಗಿ ಸಾಲ ವ್ಯವಸ್ಥೆ ರೂಪಿಸಲು ಸರ್ ಫೆಡರಿಕ್ ನಿಕೋಲ್ಸನ್ ಎಂಬಾತನನ್ನು ಯುರೋಪಿನ ಸಹಕಾರಿ ವ್ಯವಸ್ಥೆಯನ್ನು ಅಧ್ಯಯನ ನಡೆಸಿ ವರದಿ ನೀಡುವರೇ ಆದೇಶಿಸಿದ್ದಕ್ಕನುಸರಿಸಿ 1895ರಲ್ಲಿ ಸಹಕಾರ ಸಿದ್ಧಾಂತದಡಿ ಸಾಲ ಸೌಲಭ್ಯ ಕಲ್ಪಿಸಿದಲ್ಲಿ ಕೃಷಿ ಪ್ರಗತಿಗೆ ಪೂರಕವಾಗಬಹುದೆಂಬ ವರದಿ ನೀಡಿದನು. 1901ರಲ್ಲಿ ಎಡ್ವರ್ಡ್ ಲಾ ಇವರ ಅಧ್ಯಕ್ಷತೆಯಲ್ಲಿ ಸಹಕಾರಿ ಸಂಘಗಳ ಕಾನೂನು ರಚನೆಗೆ ಚಾಲನೆ ದೊರೆಯಿತು.1904 ಮಾರ್ಚ್ 25ರಂದು ಅಖಿಲ ಭಾರತಕ್ಕೆ ಸಂಬಂಧಿಸಿ ಸಹಕಾರಿ ಪತ್ತಿನ ಸಂಘಗಳ ಕಾಯ್ದೆ ಜ್ಯಾರಿ ಯಾಗುವುದರೊಂದಿಗೆ ದೇಶದ ಸಹಕಾರಿ ಆಂದೋಲನ ಅಧಿಕೃತವಾಗಿ ಆರಂಭವಾಯಿತು.

ದಿನಾಂಕ 08–05–1905ರಂದು ಆಗಿನ ಮುಂಬೈ ಪ್ರಾಂತ್ಯದ ಈಗಿನ ಕರ್ನಾಟಕದ ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ರೈತ ಮುಖಂಡ ಸಂಣರಾಮನಗೌಡ ಸಿದ್ದರಾಮನಗೌಡ ಪಾಟೀಲರ ನೇತೃತ್ವದಲ್ಲಿ ಮುಂಬೈ ವೈಸರಾಯಿ ಲಾರ್ಡ್ ಕರ್ಜನ್ ಅಪೇಕ್ಷೆಯಂತೆ ದೇಶದ ಪ್ರಥಮ ಸಹಕಾರಿಸಂಘ ಸ್ಥಾಪನೆಯಾಯಿತು.

1912ರಲ್ಲಿ ಸಹಕಾರಿ ಕಾಯ್ದೆಯಲ್ಲಿ ಮಹತ್ತರ ಬದಲಾವಣೆಗಳಾಗಿ ಸಹಕಾರ ಸಂಘಗಳ ಅಭಿವೃದ್ಧಿಗೆ ಕಾಯಕಲ್ಪ ನೀಡಲಾಯಿತು. ಸಹಕಾರ ಕ್ಷೇತ್ರದ ತೊಡಕುಗಳ ನಿವಾರಣೆಗಾಗಿ 1919ರಲ್ಲಿ ಸಹಕಾರಕಾಯ್ದೆಯನ್ನು ರಾಜ್ಯ ವ್ಯಾಪ್ತಿಗೆತರಲಾಯಿತು ತದನಂತರ ಎಲ್ಲಾ ರಾಜ್ಯಗಳು ಅದರದೇ ಆದ ಸಹಕಾರ ಕಾಯ್ದೆಯನ್ನು ಹೊಂದಿದವು'.1920ರಲ್ಲಿ ಲಾಲೂ ಬಾಯಿ ಶಾಮಲ್ ದಾಸ್ ಅಧ್ಯಕ್ಷತೆಯ ಸಮಿತಿ ಸಹಕಾರಿ ಸಂಘಗಳ ಸುಧಾರಣೆ ಮತ್ತು ಪ್ರಗತಿಯನ್ನು ಪರಿಶೀಲಿಸಿ ಮೈಸೂರು ರಾಜ್ಯದಲ್ಲಿ ಕೃಷಿಪತ್ತಿನ ಅಲ್ಪಾವಧಿ ಸಾಲ ವ್ಯವಹಾರಕ್ಕೆರಾಜ್ಯಮಟ್ಟದ ಅಪೆಕ್ಸ್ ಬ್ಯಾಂಕು ಹಾಗೂ ಮಧ್ಯಮಾವಧಿ– ಧೀರ್ಘಾವಧಿ ಸಾಲಗಳಿಗೆ ಸಂಬಂಧಿಸಿ ರಾಜ್ಯ ಮಟ್ಟದ ಭೂ ಅಡಮಾನ ಬ್ಯಾಂಕು ರಚಿಸಲು ಸೂಚಿಸಿತು.1935ರಲ್ಲಿ ರಚನೆಯಾದ ಕೆ.ಎಸ್. ಚಂದ್ರಶೇಖರಯ್ಯ ಅಧ್ಯಕ್ಷತೆಯ ಸಮಿತಿ ಸಹಕಾರದ ಪ್ರಗತಿ ಪರಿಶೀಲನೆ ನಡೆಸಿ1936ರಲ್ಲಿ ಹಲವು ಮಹತ್ತರ ಸೂಚನೆಗಳೊಂದಿಗೆ ವರದಿ ಸಲ್ಲಿಸಿದರೂ1948ರ

ತನಕ ಯಾವುದೇ ಕ್ರಮಗಳು ಜರಗಲಿಲ್ಲ.1935ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕು ಅಸ್ತಿತ್ವಕ್ಕೆ ಬಂತು.

ದೇಶದ ಸ್ವಾತಂತ್ರ್ಯ ನಂತರ 1952ರಲ್ಲಿ ಸಹಕಾರಿ ರೆಗ್ಯೂಲೇಶನ್ ರೂಪಿಸಲಾಯಿತು.1956ರಲ್ಲಿ ಭಾಷಾವಾರು ರಾಜ್ಯಗಳ ರಚನೆ ಬಳಿಕ ಪ್ರಸ್ತುತ ಜ್ಯಾರಿಯಲ್ಲಿರುವ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ1959 ಹಾಗೂ ಕರ್ನಾಟಕ ಸಹಕಾರಿ ಸಂಘಗಳ ನಿಯಮ 1960 ಅಸ್ತಿತ್ವಕ್ಕೆ ಬಂತು. ಈ ಕಾಯ್ದೆ ಅಂದಿನಿಂದ ಇಂದಿನ ತನಕ ಹಲವಾರು ಭಾರಿ ತಿದ್ದುಪಡಿಗೊಳಪಟ್ಟಿದೆ.

### ಅಂತರಾಷ್ಟ್ರೀಯ ಸಹಕಾರ ತತ್ವ ಹಾಗೂ ಸಹಕಾರ ನೀತಿಗಳು

"ತಾನು ಎಲ್ಲರಿಗಾಗಿ- ಎಲ್ಲರೂ ತನಗಾಗಿ"- ಎಂಬ ಸಹಕಾರ ತತ್ವ ಸಹಕಾರ ಚಳುವಳಿಯ ಹುಟ್ಟಿನಿಂದ ಆರಂಭವಾಗಿದೆ. ಸಮಾಜದಲ್ಲಿ ಅದಕ್ಕೊಂದು ವಿಶೇಷ ಮನ್ನಣೆ ಇದೆ.

1965ರಲ್ಲಿ ಅಂತರಾಷ್ಟ್ರೀಯ ಸಹಕಾರಿ ಮೈತ್ರಿಕೂಟ (I C A)ವು ಭಾರತದ ಡಾ. ಡಿ. ಜಿ. ಕರ್ವೆಯವರ ನೇತೃತ್ವದಲ್ಲಿ ಸಹಕಾರಿ ನೀತಿಗಳನ್ನು ಅಧ್ಯಯನ ನಡೆಸಿ ರಚನೆ ಮಾಡುವರೇ ಕ್ರಮ ಕೈಗೊಂಡಿತು. ಅದರಂತೆ ಈ ಸಮಿತಿಯು ಇಡೀ ವಿಶ್ವಕ್ಕೆ ಅನುಕರಣೆಯಾಗುವಂತೆ ಆರು ಸಹಕಾರಿ ನೀತಿಗಳನ್ನು ತಯಾರಿಸಿ ICAಮುಂದಿಟ್ಟಾಗ ಆ ಸಹಕಾರಿ ನೀತಿಗಳನ್ನು ಅಧಿಕೃತವಾಗಿ I C A ಘೋಷಣೆ ಮಾಡಿತು.ಮುಂದೆ 1995ರಲ್ಲಿ ಈ ನೀತಿಗಳನ್ನು ಪುನರ್ ಅಧ್ಯಯನ ನಡೆಸಿ ಕೆಲವು ಮಾರ್ಪಾಡುಗಳೊಂದಿಗೆ ಏಳನೇ ನೀತಿ "ಸಾಮಾಜಿಕ ಕಳಕಳಿ" ಸೇರ್ಪಡೆಯೊಂದಿಗೆ ಏಳು ಸಹಕಾರಿ ನೀತಿಗಳು ಅಸ್ತಿತ್ವ ಪಡೆದವು.

### ಏಳು ಸಹಕಾರಿ ನೀತಿಗಳು

1 ಮುಕ್ತ ಹಾಗೂ ಸ್ವಯಂಪ್ರೇರಿತ ಸದಸ್ಯತ್ವ
2 ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ
3 ಆರ್ಥಿಕ ಚಟುವಟಿಕೆಗಳಲ್ಲಿ ಸದಸ್ಯರ ಪಾಲು
4 ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ
5 ಸಹಕಾರ ಶಿಕ್ಷಣ- ತರಬೇತಿ ಮತ್ತು ಪ್ರಚಾರ
6 ಸಹಕಾರಿಗಳಲ್ಲಿ ಪರಸ್ಪರ ಕ್ರಿಯಾತ್ಮಕ ಸಹಕಾರ
7 ಸಾಮಾಜಿಕ ಕಳಕಳಿ

ವಿಶ್ವದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಸಹಕಾರ ಚಳವಳಿಯ ಯಶಸ್ಸು- ಪ್ರಗತಿಗೆ ಈ ನೀತಿಗಳು ಅಡಿಪಾಯ. ಇದರ ಹೊರತಾದ ಮಾರ್ಗದತ್ತ ಸಹಕಾರಿ ಸಂಘ ನಡೆದರೆ ಆ ಸಂಸ್ಥೆ ಯಶಸ್ಸನ್ನು ಕಾಣದು. ಯಾವುದೊ ಒಂದು ದಿನ ಅದರ ಅಸ್ತಿತ್ವಕ್ಕೆ ಅಪಾಯ ತಪ್ಪಿದ್ದಲ್ಲ.

### ಸಹಕಾರದ ಮೌಲ್ಯವರ್ಧನೆಗೆ ನಡೆದ ಚಿಂತನೆಗಳು

ದೇಶದ ಸ್ವಾತಂತ್ರ್ಯ ನಂತರ ಸಹಕಾರ ಆಂದೋಲನದ ಸರ್ವತೋಮುಖ ಅಭಿವೃದ್ಧಿಗೆ ಹಲವಾರು ತಜ್ಞರ ಸಮಿತಿಗಳು ಕಾಲಕಾಲದಲ್ಲಿ ನೇಮಕಗೊಂಡು ಅವುಗಳು ತಮ್ಮ ಶಿಫಾರಸುಗಳನ್ನು ಸರಕಾರಕ್ಕೆ ಸಲ್ಲಿಸಿದವು.

### 1 ಅಖಿಲ ಭಾರತ ಪತ್ತು ಸಮೀಕ್ಷಾ ಸಮಿತಿ (1954)

1951ರಲ್ಲಿ ಶ್ರೀ ಎ. ಡಿ. ಗೋರವಾಲಾ ಅಧ್ಯಕ್ಷತೆಯಲ್ಲಿ ರಚನೆಯಾದ ಈ ಸಮಿತಿಯು ಸಹಕಾರದ ಆಡಳಿತ ನಿಯಂತ್ರಣ- ಪಾಲು ಬಂಡವಾಳದಲ್ಲಿ ಸರಕಾರದ ಪಾಲುಗಾರಿಕೆ- ಪತ್ತು ಮತ್ತು ಮಾರಾಟ ಜೋಡಣೆ- ಹಾಗೂ ಸಹಕಾರ ಸಂಘಗಳ ಕಾರ್ಯ ವಿಸ್ತರಣೆ ಮುಂತಾದವುಗಳ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡುವುದು ಕಾರ್ಯ ಸೂಚಿಯಾಗಿತ್ತು. ಈ ಸಮಿತಿ ಅಧ್ಯಯನ ನಡೆಸಿ ಈ ಕೆಳಕಂಡ ಶಿಫಾರಸುಗಳನ್ನು 1954ರಲ್ಲಿ ಸರಕಾರಕ್ಕೆ ಸಲ್ಲಿಸಿತು.

* ಪತ್ತು-ಬ್ಯಾಂಕಿಂಗ್- ಚಟುವಟಿಕೆ ನಡೆಸುವ ದೊಡ್ಡ ಪ್ರಮಾಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ರಚನೆ
* ಪತ್ತು ಮತ್ತು ಮಾರಾಟ ವ್ಯವಸ್ಥೆಯನ್ನು ಜೋಡಿಸುವುದು. ಕೃಷಿ ಪತ್ತಿನ ಸಂಘಗಳು ಹಾಗೂ ಮಾರಾಟ ಸಂಘಗಳ ಮಧ್ಯೆ ಪತ್ತು ನಿಯಂತ್ರಣ ಕಾರ್ಯತಂತ್ರಗಳನ್ನು ರೂಢಿಸುವುದು.
* ಕೃಷಿ ಉತ್ಪನ್ನಗಳ ಸಂಗ್ರಹ-ಸಂಸ್ಕರಣೆ- ಮಾರಾಟದ ಕಾರ್ಯಗಳಿಗೆ ಆದ್ಯತೆ ನೀಡುವುದು.
* ಉಗ್ರಾಣಗಳ ನಿರ್ಮಾಣಕ್ಕೆ ಸರಕಾರದಿಂದ ಸಾಲ ಹಾಗೂ ಸಹಾಯಧನವನ್ನು ನೀಡುವುದು.
* ಸರಕಾರದ ಪಾಲುವಂತಿಗೆ ಇರುವ ಸಂಘಗಳ ಆಡಳಿತ ಮಂಡಳಿಯಲ್ಲಿ ಸರಕಾರದ ಪ್ರಾತಿನಿಧ್ಯಕ್ಕೆ ಅವಕಾಶ ನೀಡುವುದು.
* ಆರಂಭದಲ್ಲಿ ಅವಶ್ಯಕತೆಯಿದ್ದಲ್ಲಿ ವ್ಯವಸ್ಥೆಗಳನ್ನು ರೂಢಿಸುವ ಶಿಬಂಧಿಗಳ ವೇತನವನ್ನುಸರಕಾರ ಭರಿಸುವುದು.

### 2 ಸಹಕಾರ ಪತ್ತು ಸಮಿತಿ (1960)

ಸಹಕಾರ ಸಂಘಗಳ ಬಲವರ್ಧನೆಗಾಗಿ ಅವುಗಳ ಕಾರ್ಯಾಚರಣೆಯಲ್ಲಿ ಸುಧಾರಣೆಗಳನ್ನು ಬೊಟ್ಟು ಮಾಡಿತು. ಅಪೆಕ್ಸ್‌ನಿಂದ ಪ್ರಾಥಮಿಕ ತನಕದ ಸಾಲ ನೀತಿಗಳಿಗೆ ಸ್ಪಷ್ಟತೆ- ಸುಧಾರಣೆ ತರಲು ಸೂಚಿಸಿತು.

### 3 ಅಖಿಲ ಭಾರತ ಗ್ರಾಮಾಂತರ ಪತ್ತು ಸಮಿತಿ(1969)

ಈ ಸಮಿತಿಯು ಪತ್ತು ವ್ಯವಸ್ಥೆಯ ಪ್ರಾಥಮಿಕ

ಹಂತದಲ್ಲಿ ಆರ್ಥಿಕ ಸುಭದ್ರತೆಯನ್ನು ಪ್ರತಿಪಾದಿಸಿತು. ಸುಸ್ತಿ ಬಾಕಿ ನಿಯಂತ್ರಣ –ಸಾಲ ನೀಡಿಕೆ ನೀತಿಗಳು ಹಾಗೂ ವಿಧಾನಗಳಿಗೆ ಎರಡು ಸೂತ್ರಗಳನ್ನು ಹೇಳಿತು. ಗೊಬ್ಬರ– ಕೃಷಿ ಸಲಕರಣೆಗಳ ರೂಪದಲ್ಲಿ ಭಾಗಶಃ ಸಾಲ ನೀಡುವುದು ಇದರಲ್ಲಿ ಒಂದಾಗಿತ್ತು.

ಕೃಷಿಕರಿಗೆ ತೀರಾ ಅವಶ್ಯವಾದ ನೀರು– ವಿದ್ಯುತ್ ರಸಗೊಬ್ಬರ ಮುಂತಾದ ಪ್ರಮುಖ ವಿಷಯಗಳ ಪೂರೈಕೆಗೆ ಸರಕಾರ ಪ್ರಾಧಿಕಾರಗಳ ಮೂಲಕ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಿತು.ಗ್ರಾಮೀಣ ವಿದ್ಯುದೀಕರಣ ಕಾರ್ಪೋರೇಶನ್ ಸ್ಥಾಪನೆ ಈ ಶಿಫಾರಸ್ಸಿನಲ್ಲಿ ಒಳಗೊಂಡಿತ್ತು.

ಚುನಾಯಿತ ಆಡಳಿತ ಮಂಡಳಿ– ಮತ್ತು ವೇತನ ಶಿಬಂದಿಗಳ ನಡುವೆ ಹೊಣೆಗಾರಿಕೆಗಳ ನಿಗಧೀಕರಣ ಶಿಷ್ಟಾಚಾರಗಳನ್ನು ಹೊಂದುವುದು ಅಗತ್ಯ ಎಂಬುದಾಗಿ ಅಭಿಪ್ರಾಯ ಪಟ್ಟಿತು.

### 4 ಬಾವಾ ಕಮಿಟಿ(1971)

ಈ ಸಮಿತಿ ಗ್ರಾಮೀಣ ಪ್ರದೇಶದಲ್ಲಿ ದೊಡ್ಡಪ್ರಮಾಣದ ವಿವಿಧೋದ್ದೇಶ ಸಹಕಾರ ಸಂಘಗಳನ್ನು ಸ್ಥಾಪಿಸಲು ಸೂಚಿಸಿತು. ಇದರ ಹಿನ್ನಲೆಯಲ್ಲಿ ರಾಷ್ಟ್ರೀಯ ಕೃಷಿ ಆಯೋಗವು(1976) ರಾಷ್ಟ್ರೀಕೃತ ಬ್ಯಾಂಕುಗಳ ಸಹಯೋಗದೊಂದಿಗೆ ರೈತ ಸೇವಾ ಸಹಕಾರ ಸಂಘಗಳನ್ನು ಸ್ಥಾಪಿಸಲು ಸೂಚಿಸಿದ ಫಲಶ್ರುತಿ ಸಣ್ಣ ಕಾರ್ಯವ್ಯಾಪ್ತಿಯ ಹಲವು ಸಂಘಗಳು ಏಕೀಕೃತಗೊಂಡು ರೈತ ಸೇವಾ ಸಹಕಾರ ಸಂಘಗಳು ಸ್ಥಾಪನೆಯಾಯಿತು

### 5 ಹಜಾರಿ ಕಮಿಟಿ(1975)

ಅಲ್ಪಾವಧಿ ಹಾಗೂ ಧೀರ್ಘಾವಧಿ ಸಾಲಗಳಿಗೆ ರಾಜ್ಯ ಅಪೆಕ್ಸ್ ಮತ್ತು ಭೂಅಡಮಾನಬ್ಯಾಂಕು ಎಂಬ ಪ್ರತ್ಯೇಕತೆ ಕಲ್ಪಿಸದೇ ಗ್ರಾಮಮಟ್ಟದಲ್ಲಿ ಪ್ರಾಥಮಿಕ ಸಂಘಗಳು ಕೂಡಾ ಅಲ್ಪಾವಧಿ ಜತೆಯಲ್ಲಿ ಮಧ್ಯಮಾವಧಿ ಧೀರ್ಘಾವಧಿ ಸಾಲಗಳನ್ನು ನೀಡಬಹುದೆಂದು ಈ ಸಮಿತಿ ನೀಡಿದ ಶಿಫಾರಸ್ಸಿಗೆ ಧೀರ್ಘಾವಧಿ ಸಾಲವ್ಯವಸ್ಥೆ( ರಾಜ್ಯ ಭೂಅಡಮಾನ)ಯು ತನ್ನ ಅಸ್ತಿತ್ವಕ್ಕೆ ಕುಂದುಬರಬಹುದೆಂಬ ಕಾರಣಕ್ಕಾಗಿ ಆಕ್ಷೇಪ ವ್ಯಕ್ತಪಡಿಸಿತು .

### 6 ಕ್ರಾಫಿಕಾರ್ಡ ಸಮಿತಿ(1981)

ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬಗ್ಗೆ ಒತ್ತು ನೀಡಿ ವಿಶೇಷವಾಗಿ ರೈತ ಸೇವಾ ಸಹಕಾರಿ ಸಂಘಗಳು ಮತ್ತು ಆದಿವಾಸಿ ವಿವಿದೊದ್ದೇಶ ಸಹಕಾರಿ ಸಂಘಗಳನ್ನು ಅಭಿವೃದ್ಧಿ ಪಡಿಸಲು ನಿಗದಿತ ಅವಧಿ ಹಾಗೂ ಸೂತ್ರಗಳನ್ನು ಹೇಳಿ ರಾಜ್ಯ ಸರಕಾರವನ್ನು ಒತ್ತಾಯಿಸಿತು. ಸಮಗ್ರ ಗ್ರಾಮೀಣ ಅಭಿವೃದ್ಧಿ ಹಿನ್ನಲೆಯಲ್ಲಿ"ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಬ್ಯಾಂಕು" (ನಬಾರ್ಡ್) ಸ್ಥಾಪನೆಯ ಅಗತ್ಯತೆ ಹಾಗೂ ಸಾಧ್ಯತೆಯನ್ನು ಪರಿಶೀಲಿಸಿತು.

ಉದ್ದೇಶಪೂರ್ವಕ ಸುಸ್ತಿದಾರರಿಗೆ ದಂಡನೆ ಹಾಗೂ ಕ್ರಿಮಿನಲ್ ಕಾಯ್ದೆಯಡಿ ಶಿಕ್ಷೆಗೆ ಅವಕಾಶ ಕಲ್ಪಿಸುವ ಬಗ್ಗೆ ಪ್ರಸ್ತಾಪಿಸಿತು.ಭೂಅಭಿವೃದ್ಧಿ ಬ್ಯಾಂಕುಗಳು

ಕೃಷಿಗೆ ಪೂರಕ ಚಟುವಟಿಕೆಗಳಾದ ತೋಟಗಾರಿಕೆ ಹೈನುಗಾರಿಕೆ–ಕೋಳಿಸಾಕಣೆ ಹಂದಿಸಾಕಣೆ ಮೀನುಗಾರಿಕೆ–ರೇಷ್ಮೆಕೃಷಿ–ಗೋಬರ್ ಗ್ಯಾಸ್–ಉಗ್ರಾಣ– ಗೋದಾಮು–ಗುಡಿಕೈಗಾರಿಕೆ–ಗ್ರಾಮೀಣ ಕರಕುಶಲ ಚಟುವಟಿಕೆಗಳಿಗೆ ಸಾಲನೀಡುವಂತೆ ಈ ಸಮಿತಿ ಸೂಚಿಸಿತು.

### 7 ಕುಸ್ರೋ ಸಮಿತಿ(1989)

ಈ ಸಮಿತಿ 1986ರಲ್ಲಿ ರಚಿಸಲ್ಪಟ್ಟು 1989ರಲ್ಲು ವರದಿ ನೀಡಿತು.ಇದರಲ್ಲಿರುವ ಮುಖ್ಯ ಸಲಹೆ ವ್ಯಾಪಾರ ಅಭಿವೃದ್ಧಿ ಯೋಜನೆ. (ಃ ಆ ಕ)ಈ ಯೋಜನೆಯು ಒಂದು ನಿರಂತರ ಪ್ರಕ್ರಿಯೆ. ಸಂಘಗಳ ಸಾಮರ್ಥ್ಯ ಬಲಹೀನತೆ ಅವಕಾಶ ತೊಂದರೆಗಳ ಬಗ್ಗೆ ಅರಿವು ಮೂಡಿಸಿ ಅದರ ಆಧಾರದಲ್ಲಿ ಸಂಸ್ಥೆಗಳ ಚಟುವಟಿಕೆ ಗಳನ್ನು ವೃದ್ದಿಸುವುದು ಯೋಜನೆಯ ಉದ್ದೇಶ. ಪ್ರಾಥಮಿಕ ಸಂಸ್ಥೆಗಳಿಗೆ ಮೇಲುಸ್ತರ ಸಂಸ್ಥೆಗಳು ಭೌತಿಕ ಸೌಲಭ್ಯಗಳಾದ ಕೌಂಟರ್ ಸುರಕ್ಷಿತ ಕವಾಟುಗಳಿಗೆ ನೆರವು ನೀಡುವರೇ ಸಮಿತಿ ಸೂಚಿಸಿದೆ. ರಾಜ್ಯ ಬ್ಯಾಂಕುಗಳು ಜಿಲ್ಲಾ ಬ್ಯಾಂಕುಗಳು "ಸಹಕಾರ ಅಭಿವೃದ್ದಿ ನಿಧಿ"ಯನ್ನು ಸ್ಥಾಪಿಸಿ ಅದರಿಂದ ನೆರವು ನೀಡುವ ಪ್ರಸ್ತಾಪ ವರದಿಯಲ್ಲಿದೆ."ರಾಷ್ಟ್ರೀಯ ಸಹಕಾರ ಬ್ಯಾಂಕು" ಸ್ಥಾಪಿಸುವಂತೆ ಸಲಹೆ ನೀಡಲಾಗಿದೆ.

### 8 ನಬಾರ್ಡ್ ನೇಮಿತ ವರ್ಕಿಂಗ್ ಗ್ರೂಫ್(1985)

ಭೂಅಭಿವೃದ್ಧಿ ಬ್ಯಾಂಕು ಮತ್ತು ಕೃಷಿ ಪತ್ತಿನ ಸಹಕಾರ ಸಂಘಗಳ ಆರೋಗ್ಯಕರ ಸ್ಪರ್ಧೆ ಮೂಲಕ ರೈತರ ಅವಶ್ಯಕತೆಗಳನ್ನು ಪೂರೈಸಲು ಸಲಹೆ ನೀಡಿದೆ ಪ್ರಾಥಮಿಕ ಸಹಕಾರಿ ಸಂಘಗಳಲ್ಲಿ ವಿವಿದೋದ್ದೇಶ ಚಟುವಟಿಕೆಗಳಿದ್ದರೂ ಅವು ನಿರೀಕ್ಷಿತ ಯಶಸ್ಸು ಕಂಡಿಲ್ಲ ಎಂದು ಹೇಳಿದೆ. ಇದರತ್ತ ವಿಶೇಷ ಗಮನ ಹರಿಸಲು ಸೂತ್ರಗಳನ್ನು ಹೇಳಲಾಗಿದೆ

### 9 ಚೌಧುರಿ ಬ್ರಹ್ಮಪ್ರಕಾಶ ಸಮಿತಿ(1991)

1991ರಲ್ಲಿ ದೇಶದ ಹೊಸ ಆರ್ಥಿಕ ನೀತಿಯು ಖಾಸಗೀಕರಣ ಜಾಗತೀಕರಣ ಉದಾರೀಕರಣ ಎಂಬ ಸಿದ್ದಾಂತದಡಿ ಜ್ಯಾರಿಗೆ ಬಂತು. ಇದರ ಪರಿಣಾಮ ಸಹಕಾರದ ಮೇಲೂ ಗೋಚರಿಸಿತು. ಆದ್ದರಿಂದ ಬದಲಾವಣೆ ಅನಿವಾರ್ಯ ಹಂತ ತಲಪಿತು.

ಸಹಕಾರ ಒಂದು ಶತಮಾನದಲ್ಲಿ ಹಲವಾರು ಏಳುಬೀಳುಗಳನ್ನು ಕಂಡಿದೆ. 1970ರ ಬಳಿಕ ವಿಪರೀತ ರಾಜಕೀಯ ಹಸ್ತಕ್ಷೇಪ ,ಅಧಿಕಾರಿಗಳ ಭ್ರಷ್ಟತೆಯಿಂದ ಸಹಕಾರದ ಮೇಲೆ ದುಷ್ಪರಿಣಾಮಗಳಾದವು. ಇದನ್ನು ಅಧ್ಯಯನ ನಡೆಸಲು ನೇಮಕ ಗೊಂಡ ಅರ್ಧನಾರೀಶ್ವರನ್ ಸಮಿತಿ ಸಹಕಾರದ ಮೇಲಾಗಿರುವ ತೊಡಕುಗಳನ್ನು ಎತ್ತಿತೋರಿಸಿ ಇದಕ್ಕೆ ಸಹಕಾರದಲ್ಲಿ ಸ್ವಾಯತ್ತೆ ಸ್ವಯಂಆಡಳಿತ ಒಂದೇ ದಾರಿ ಎಂಬುದಾಗಿ ಸಾರಿ ಹೇಳಿತು. ಈ ವರದಿಯ ಜ್ಯಾರಿಗೆ ನೀತಿಗಳನ್ನು ರೂಪಿಸುವರೇ ರಚಿಸಲಾದ ಚೌಧುರಿ ಬ್ರಹ್ಮಪ್ರಕಾಶ ಸಮಿತಿ ಸಹಕಾರಿಗಳಿಗೆ ಸ್ವಾಯತ್ತೆ ಸ್ವಯಂ ಆಡಳಿತ ನೀಡಬಲ್ಲ ಸಂಪೂರ್ಣ ಪ್ರಜಾಸತ್ತಾತ್ಮಕವಾದ ಮಾದರಿ ಸಹಕಾರಿ ಕಾಯ್ದೆ ರಚಿಸಿ ಮಂಡನೆ ಮಾಡಿತು. ಆ ಕಾಯ್ದೆಯ ಸ್ವರೂಪದಲ್ಲಿ ಎಲ್ಲಾ ರಾಜ್ಯಗಳು ತಮ್ಮ ಕಾಯ್ದೆಗಳನ್ನು ತಿದ್ದುಪಡಿಗೊಳಪಡಿಸಬೇಕು ಎಂಬುದು ಸಮಿತಿಯ ಆಶಯವಾಗಿತ್ತು .ಇದರ ಆಧಾರದಲ್ಲಿ ಕೇಂದ್ರ ಸರಕಾರದ ಬಹುರಾಜ್ಯ ಸಹಕಾರಿ ಕಾಯ್ದೆ 2002ರಲ್ಲಿ ಆಮೂಲಾಗ್ರ ಬದಲಾವಣೆಯಾಯಿತು. ಕರ್ನಾಟಕದಲ್ಲಿ ಸಹಕಾರ ಸಂಘಗಳ ಕಾಯ್ದೆ1959ನ್ನು ಅಸ್ತಿತ್ವದಲ್ಲಿ ಇಟ್ಟುಕೊಂಡು ಸಮಾನಾಂತರವಾದ ಸಂಪೂರ್ಣ ಸ್ವಾಯತ್ತೆ ಹೊಂದಿರುವ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ1997 ಜ್ಯಾರಿಯಾಯಿತು. ದೇಶದ ಹಲವಾರು ರಾಜ್ಯಗಳು ಮಾದರಿ ಸಹಕಾರಿ ಕಾಯ್ದೆ ಸ್ವರೂಪದ ಕಾಯ್ದೆಗಳನ್ನು ಜ್ಯಾರಿಮಾಡಿದವು. ಇಷ್ಟೆಲ್ಲಾ ಬದಲಾವಣೆಗಳು ಆದರೂ ಸಹಕಾರಿ ರಂಗ ಇನ್ನೂ ಕೂಡಾ ದೊಡ್ಡ ಪ್ರಮಾಣದ ಸ್ವಚ್ಛತೆ ಹೊಂದದೇ ಇರುವುದು ಖೇದಕರ ಸಂಗತಿ.

### 10 ಸಹಕಾರ ಪತ್ತು ವ್ಯವಸ್ಥೆಯ ಪುನರುಜ್ಜೀವನ

ದೇಶದ ಗ್ರಾಮೀಣ ಪತ್ತು ವ್ಯವಸ್ಥೆಯನ್ನು ಹೊಸ ದಿಗಂತಕ್ಕೆ ಕೊಂಡೊಯ್ಯುವ ಪ್ರಬಲ ಉದ್ದೇಶದ ನೆಲೆಯಲ್ಲಿ ಜಗದೀಶ ಕಪೂರ ಸಮಿತಿ ವಿ ಯಸ್ ವ್ಯಾಸವ ಸಮಿತಿ ಬಾಬಾಸಾಹೇಬ ವಿಖೆ ಪಾಟೀಲ ಸಮಿತಿಗಳು ಬೇರೆಬೇರೆ ಸಂದರ್ಭಗಳಲ್ಲಿ ಅಧ್ಯಯನ ನಡೆಸಿ ಕೃಷಿ ಪತ್ತಿನ ಪುನರುಜ್ಜೀವನಕ್ಕಾಗಿ ವರದಿ ನೀಡಿದ ಹಿನ್ನಲೆಯಲ್ಲಿ ಪ್ರೊ ವೈದ್ಯನಾಥನ್ ಸಮಿತಿಯನ್ನು ಕೃಷಿ ಪತ್ತಿನ ಸುಧಾರಣೆಯ ವಿಸ್ತೃತ ವರದಿ ನೀಡುವರೇ ಅಸ್ತಿತ್ವಕ್ಕೆ ತರಲಾಯಿತು.

### 11 ಪ್ರೊ. ಎ .ವೈದ್ಯನಾಥನ್ ಸಮಿತಿ

ಸಹಕಾರಿ ಕೃಷಿ ಪತ್ತಿನ ವ್ಯವಸ್ಥೆಯ ಸುಧಾರಣೆಗೆ ಕಾರ್ಯಸಾಧು ಕ್ರಿಯಾಯೋಜನೆ ರೂಪಿಸುವುದು ಅದರ ಜ್ಯಾರಿಗೆ ಸೂಕ್ತ ನಿಯಂತ್ರಣ ನಷ್ಟದಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಪುನರುಜ್ಜೀವನಕ್ಕೆ ಆರ್ಥಿಕ ಸಹಾಯದ ಅಂದಾಜು ತಯಾರಿ ಹಾಗೂ ವಿತ್ತೀಯ ವ್ಯವಸ್ಥೆಗಳ ಬಗ್ಗೆ ಸಲಹೆ ಮುಂತಾದ ಕಾರ್ಯಸೂಚಿಯೊಂದಿಗೆ ಕೇಂದ್ರ ಸರಕಾರದಿಂದ ರಚಿಸಲ್ಪಟ್ಟ ಏಳು ಮಂದಿ ತಜ್ಞರನ್ನೊಳಗೊಂಡ ಈ ಸಮಿತಿ ಪೂರ್ತಿ ಅಧ್ಯಯನ ನಡೆಸಿ 2004 ಡಿ. 30ರಂದು ತನ್ನ ವರದಿಯನ್ನು ಸಲ್ಲಿಸಿ ಸಾರ್ವಜನಿಕರ ಸಲಹೆಗಳಿಗೆ ಆಹ್ವಾನ ನೀಡಿತು. ತನ್ನ ವರದಿಯಲ್ಲಿ ದೇಶದ ಸಹಕಾರಿ ಚಳವಳಿಯ ಹುಟ್ಟಿನಿಂದ ಆರಂಭಿಸಿ ಅಂದಿನ ತನಕದ ಸಹಕಾರದ ಬೆಳವಣಿಗೆ ಹಾಗೂ ವಿದ್ಯಮಾನಗಳನ್ನು ವಿಶ್ಲೇಷಣೆ ನಡೆಸಿರುವುದು ಉಲ್ಲೇಖನೀಯ. ಅಲ್ಲದೇ ಈ ಕ್ಷೇತ್ರ ದುರ್ಬಲವಾಗಲು ಕಾರಣಗಳನ್ನು ವಿಶೇಷವಾಗಿ ಬೊಟ್ಟು ಮಾಡಿದೆ.ಸಹಕಾರಿ ರಂಗ ಬಲಪಡಿಸಲು ಈ ಕೆಳಗಿನ ಕೆಲವೊಂದು ಶಿಫಾರಸುಗಳನ್ನು ಸಮಿತಿ ಮಾಡಿತು .ನಷ್ಟದಲ್ಲಿರುವ ಕೃಷಿ ಪತ್ತಿನ ಸಂಘಗಳಿಗೆ ವಿಶೇಷ ಅನುದಾನ . ಸ್ವಾಯತ್ತಾ ಸದಸ್ಯಕೇಂದ್ರಿತ ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿ ಬಲಪಡಿಸುವರೇ ಸಹಕಾರಿ ಕಾನೂನಿನಲ್ಲಿ ಕ್ರಾಂತಿಕಾರಿ ಬದಲಾವಣೆ. ನೌಕರರ ಕಾರ್ಯಕ್ಷಮತೆ ಹೆಚ್ಚಿಸಲು ವಿಶೇಷ ತರಬೇತಿ.

ವಿಶೇಷ ಅನುದಾನಕ್ಕೆ ಇಡೀ ದೇಶಕ್ಕೆ ಸಂಬಂಧಿಸಿ ರೂಪಾಯಿ 14839/ಕೋಟಿ ಯ ಕ್ರಿಯಾಯೋಜನೆ ಹಾಗೂ ಇದರಲ್ಲಿ 53%ಕೇಂದ್ರ ಸರಕಾರದ ಪಾಲು 31%ರಾಜ್ಯ ಸರಕಾರದ ಪಾಲು ಹಾಗೂ16% ಸಹಕಾರಿ ರಂಗ ನೀಡುವಂತೆ ಸಲಹೆ ಮಾಡಿದೆ. ಅದೇ ರೀತಿ ಬ್ರಹ್ಮಪ್ರಕಾಶ ಸಮಿತಿಯ ಮಾದರಿ ಕಾಯ್ದೆಯನ್ನು ಎಲ್ಲಾ ರಾಜ್ಯಗಳು ಒಪ್ಪಿಕೊಂಡು ಜ್ಯಾರಿಗೆ ತರಲು ಶಿಪಾರಸು ಮಾಡಲಾಗಿದೆ. ಕಾಯ್ದೆಯಲ್ಲಿ ನಿಯಮಗಳ ರಚನೆಯಿರಬಾರದು ನಿರ್ದೇಶಕರು ಸಾಮಾನ್ಯ ಸಭೆಗೆ ಉತ್ತರದಾಯಿತ್ವ ಶಿಬಂಧಿ ಆಡಳಿತ ಮಂಡಳಿಯಿಂದ ನೇಮಕ ಹಾಗೂ ಅವರಿಗೆ ಉತ್ತರದಾಯಿಯಾಗಿರಬೇಕು. ಸರಕಾರದ ಹಸ್ತಕ್ಷೇಪಕ್ಕೆ ಕಡಿವಾಣ ನಿಗದಿತ ಸಮಯದಲ್ಲಿ ಲೆಕ್ಕಪರಿಶೋಧನೆ ಚುನಾವಣೆ ಸಾಮಾನ್ಯ ಸಭೆಗಳು ಜರಗುವರೇ ಅವಕಾಶ ಕಲ್ಪಿಸಲು ಪ್ರಸ್ತಾಪಿಸಲಾಗಿದೆ. ಶಿಫಾರಸುಗಳನ್ನು ಜ್ಯಾರಿಗೆ ತರುವ ಉಸ್ತುವಾರಿಗಳ ಬಗ್ಗೆ ಸ್ಪಷ್ಟಪಡಿಸಲಾಗಿದೆ. ಜಿಲ್ಲಾ ಬ್ಯಾಂಕುಗಳು ಹಾಗೂ ಅಪೆಕ್ಸ್ ಬ್ಯಾಂಕುಗಳ ಪುನರ್ ಸಂಘಟನೆಯ ಪ್ರಸ್ತಾಪನೆ ಕೂಡಾ ಇದರಲ್ಲಿ ಇದೆ. ಒಟ್ಟಾರೆಯಾಗಿ ಹೇಳುವುದಾದರೆ ಸಹಕಾರಿ ಕೃಷಿ ಪತ್ತಿನ ವ್ಯವಸ್ಥೆಯ ಸಮಗ್ರ ಪುನಶ್ಚೇತನಕ್ಕೆ ಇದೊಂದು ಉಜ್ವಲ ಬೆಳಕಿನ ದಾರಿದೀಪ. ನಮ್ಮ ರಾಜ್ಯದಲ್ಲಿ ಅಲ್ಪಾವಧಿ ಸಾಲದ ಅಪೆಕ್ಸ್ ಬ್ಯಾಂಕು ವಲಯದಲ್ಲಿ ಆರ್ಥಿಕ ಸಹಾಯವನ್ನು ಸರಕಾರದಿಂದ ಪಡೆಯುವ ಉದ್ದೇಶದಿಂದ ಒಂದಷ್ಟು ಶಿಫಾರಸುಗಳು ಜ್ಯಾರಿಯಾದವು. ಆದರೆ ದೀರ್ಘಾವಧಿ

ಸಾಲದ ಭೂ ಅಭಿವೃದ್ಧಿ ಬ್ಯಾಂಕು ವಲಯಕ್ಕೆ ಸಂಬಂಧಿಸಿ ಈ ವರದಿಯ ಯಾವುದೇ ಶಿಫಾರಸುಗಳು ಅನುಷ್ಠಾನಕ್ಕೆ ಬಾರದೆ ಇರುವುದು ದುಃಖದ ಸಂಗತಿ. ಸರಕಾರ ಹಾಗೂ ಸಂಬಂಧಿಸಿದವರ ಇಚ್ಚಾಶಕ್ತಿಯ ಕೊರತೆ ಈ ವರದಿಯ ಅಪೂರ್ಣಅನುಷ್ಠಾನದಲ್ಲಿ ಎದ್ದುಕಾಣುತ್ತಿದೆ.

### 12 ಸಂವಿಧಾನದ 97ನೇ ತಿದ್ದುಪಡಿ

2011ರಲ್ಲಿ ಸಂವಿಧಾನದ 97ನೇ ತಿದ್ದುಪಡಿ ಮೂಲಕ ಸಹಕಾರಕ್ಕೆ ಮಹತ್ತರವಾದ ಸ್ಥಾನ ದೊರೆಯಿತು. ಸಹಕಾರ ಸಂಘಗಳ ಸ್ಥಾಪನೆ ನಾಗರಿಕರ ಮೂಲಭೂತ ಹಕ್ಕಾಗಿ ಪರಿಗಣಿಸಲ್ಪಟ್ಟುದು ದೇಶದ ಸಹಕಾರ ಚಳುವಳಿ ಇತಿಹಾಸದ ಪ್ರಮುಖ ಮೈಲುಗಲ್ಲು. ಸಹಕಾರ ಸಂಘಗಳ ಸ್ವಇಚ್ಚಾರಚನೆ ಸ್ವಾಯತ್ತಾ ಕಾರ್ಯಾಚರಣೆ ಪ್ರಜಾಸತ್ತಾತ್ಮಕ ಹತೋಟಿ ಮತ್ತು ವೃತ್ತಿಪರ ನಿರ್ವಹಣೆಯನ್ನು ಪ್ರೋತ್ಸಾಹಿಸುವುದು ಈ ತಿದ್ದುಪಡಿಯ ಪ್ರಮುಖ ಆಶಯವಾಗಿತ್ತು.20 ವರ್ಷಗಳ ಹಿಂದೆ ಬ್ರಹ್ಮಪ್ರಕಾಶ ಚೌಧುರಿ ಸಮಿತಿ ತಯಾರಿಸಿದ ಮಾದರಿ ಸಹಕಾರಿ ಕಾಯ್ದೆಯ ಬಹುಪಾಲು ಅಂಶಗಳು ಸಂವಿಧಾನ ತಿದ್ದುಪಡಿಯಲ್ಲಿ ಒಳಗೊಂಡಿರುವುದು ಉಲ್ಲೇಖನೀಯ. ಇದರ ಅಡಿಗಟ್ಟಿನಲ್ಲಿ ಕರ್ನಾಟಕ ಸಹಕಾರಿ ಕಾಯ್ದೆ1959–––2013ರಲ್ಲಿ ತಿದ್ದುಪಡಿಗೊಳಪಟ್ಟು ರಾಜಕೀಯ ಹಸ್ತಕ್ಷೇಪ ಸರಕಾರದ ಹತೋಟಿಗೆ ಮುಕ್ತತೆ ವೃತ್ತಿಪರ ಲೆಕ್ಕಪರಿಶೋಧನೆ ಚುನಾವಣಾ ಆಯೋಗ ರಚನೆ ಚುನಾವಣಾ ತಕರಾರುಗಳು ಸಿವಿಲ್ ನ್ಯಾಯಾಲಯಗಳ ವ್ಯಾಪ್ತಿಗೆ ಮುಂತಾದ ಹತ್ತು ಹಲವು ವಿಷಯಗಳು ಸೇರ್ಪಡೆಯಾ ತಿದ್ದುಪಡಿಗೊಳಪಟ್ಟು ಸಹಕಾರದ ಮೌಲ್ಯವರ್ಧನೆಗೆ ದಾರಿ ಸುಗಮವಾಯಿತು. ಆದರೆ ಈ ಕಾಯ್ದೆ 2014ರಲ್ಲಿ ಸರಕಾರದ ಸ್ವಾರ್ಥನೀತಿಯಿಂದ ಸಂವಿಧಾನದ ಆಶಯಕ್ಕೆ ವಿರುದ್ದವಾಗಿ ಮರುತಿದ್ದುಪಡಿಗೊಳಪಟ್ಟು ಹೆಚ್ಚುಕಮ್ಮಿ ಹಿಂದಿನ ಸ್ಥಿತಿಗೆ ಜ್ಯಾರಿದುದು ದುರಾದೃಷ್ಟಕರ ವಿಚಾರ. ಈ ಮಧ್ಯೆ ಗುಜರಾತ್ ಉಚ್ಚ ನ್ಯಾಯಾಲಯ ಸಂವಿಧಾನದ 97ನೇ ತಿದ್ದುಪಡಿಯನ್ನು ರದ್ದುಪಡಿಸಿತು. ಇದಕ್ಕೆ ಸಂಬಂಧಿಸಿದ ದಾವೆ ಸುಪ್ರೀಂಕೋರ್ಟಿನಲ್ಲಿ ವಿಚಾರಣೆಯ ಹಂತದಲ್ಲಿದ್ದು ಅಂತಿಮ ತೀರ್ಪು ಬರಲು ಬಾಕಿಯಿರುತ್ತದೆ.

ಸಹಕಾರ ಚಳುವಳಿ ಕಳೆದ 116 ವರ್ಷಗಳಲ್ಲಿ ಹಲವು ಏಳುಬೀಳುಗಳನ್ನು ಕಂಡು ಜನರ ಜೀವನದ ಅಂಗವಾಗಿ ಸಾಗಿಬಂದಿದ್ದು ಗ್ರಾಮೀಣ ಪ್ರಜೆಗಳ ಬದುಕಿಗೆ ಕೈಗನ್ನಡಿ ಹಿಡಿದಿದೆ. ಅದೇ ರೀತಿ ಪಟ್ಟಣವಾಸಿಗಳ ಆರ್ಥಿಕ ಚಟುವಟಿಕೆಯಲ್ಲಿ ವಾಣಿಜ್ಯ ಬ್ಯಾಂಕುಗಳ ಜತೆ ಪೈಪೋಟಿ ನೀಡುವ ಮೂಲಕ ಪಟ್ಟಣದಲ್ಲೂ ಜನಪ್ರಿಯತೆ ಉಳಿಸಿಕೊಂಡಿದೆ. ಸಹಕಾರದ ಆಡಳಿತದಲ್ಲಿ ರಾಜಕೀಯ ಚಟುವಟಿಕೆ ಸರಕಾರದ ಸ್ವಾರ್ಥ ಅಧಿಕಾರಿಗಳ ಭ್ರಷ್ಟಾಚಾರ ಶಿಬಂಧಿಗಳ ಅಶಿಸ್ತಿನ ದುಡಿಮೆ ಸದಸ್ಯರ ಅಸಡ್ಡೆಯ ನಿಲುಮೆ ಹಾಗೂ ಸಹಕಾರಿ ಜ್ಞಾನದ ಕೊರತೆ ಅಲ್ಲಲ್ಲಿ ಬೆಳಕಿಗೆ ಬರುತ್ತಿದ್ದು ಇಂತಹ ಲಜ್ಜೆಗೆಟ್ಟ ವ್ಯವಹಾರಗಳು ಸಹಕಾರದ ಬಲವರ್ಧನೆಗೆ ಮಾರಕ. ಮಾದರಿ ಸಹಕಾರಿ ಕಾಯ್ದೆ ಹಾಗೂ ಸಂವಿಧಾನದ 97ನೇ ತಿದ್ದುಪಡಿಯ ಆಶಯದಂತೆ ಸಹಕಾರ ಸಂಘಗಳ ಸರ್ವ ವ್ಯವಹಾರಗಳು ನಡೆದಾಗ ದೇಶದ ಜನಮಾನಸದ ಬದುಕು ನೆಮ್ಮದಿಯಾಗಬಹುದು. ಗ್ರಾಮೀಣ ಭಾರತ ಸುಭಿಕ್ಷೆಯತ್ತ ಸಾಗಿ ದೇಶ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುವುದರಲ್ಲಿ ಸಂಶಯವಿಲ್ಲ.

******

### ರಾಧಾಕೃಷ್ಣ ಕೋಟೆಯವರ ಪರಿಚಯ:

ದ.ಕ. ಜಿಲ್ಲೆ ಸುಳ್ಯ ತಾಲೂಕು ಕಳಂಜ ಗ್ರಾಮದಲ್ಲಿ ವಾಸ್ತವ್ಯ. ವೃತ್ತಿಯಲ್ಲಿ ಕೃಷಿಕ ಪ್ರವೃತ್ತಿಯಲ್ಲಿ ಸಹಕಾರದಲ್ಲಿ ಆಸಕ್ತಿ.1978ರಿಂದ 2015ರ ತನಕ ಸಹಕಾರಿ ಕ್ಷೇತ್ರದ ವಿವಿಧ ಜವಾಬ್ದಾರಿಗಳ ನಿರ್ವಹಣೆ. ಕುಕ್ಕುಜಡ್ಕ ಗ್ರಾಮಾಂತರ ಹಾಲು ಉತ್ಪಾದಕ ಸಹಕಾರಿ ಸಂಘದನಿರ್ದೇಶಕ ಕಳಂಜ ಬಾಳಿಲ ಕೃಷಿ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ಹಾಗೂ ಅಧ್ಯಕ್ಷ. ಸುಳ್ಯ ತಾಲೂಕು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ನಿರ್ದೇಶಕ ಹಾಗೂ ಅಧ್ಯಕ್ಷ. ಮಂಗಳೂರು ಜನತಾ ಬಜಾರ್ ನಿರ್ದೇಶಕ. ದ.ಕ ಜಿಲ್ಲಾ ಸಹಕಾರಿ ಯೂನಿಯನ್ ನಿರ್ದೇಶಕ. ಕ್ಯಾಂಪ್ಕೋ ನಿರ್ದೇಶಕ. ಮಂಗಳೂರು ಕೃಷಿಯುತ್ಪನ್ನ ಮಾರುಕಟ್ಟೆ ಸಮಿತಿ ಸದಸ್ಯ.

ಸಹಕಾರಿ ಕ್ಷೇತ್ರದ ಸ್ವಯಂಸೇವಾ ಸಂಸ್ಥೆ ಸಹಕಾರ ಭಾರತಿ ತಾಲೂಕು, ಜಿಲ್ಲಾ ರಾಜ್ಯ ಘಟಕದ ಪದಾಧಿಕಾರಿ ಹಾಗೂ ಸಹಕಾರಿರಂಗದ ಖಾಸಗಿ ಪತ್ರಿಕೆ "ಸಹಕಾರ ಕುಸುಮ"ದ ಸಂಪಾದಕನಾಗಿ ಕಾರ್ಯನಿರ್ವಹಣೆ. ಸಹಕಾರಕ್ಕೆ ಸಂಬಂಧಿಸಿ 80ಕ್ಕೂ ಹೆಚ್ಚು ಲೇಖನಗಳ ಬರವಣಿಗೆ. ಹಲವು ಲೇಖನಗಳು ದಿನಪತ್ರಿಕೆ ಹಾಗೂ ಸಹಕಾರ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಹೊಸ ಸಹಕಾರಿ ಸಂಘಗಳಿಗೆ ಉಪವಿಧಿ ತಯಾರಿಸುವುದು ಅಸ್ತಿತ್ವದಲ್ಲಿರುವ ಸಂಘಗಳ ಉಪವಿಧಿಗಳನ್ನು ಆಮೂಲಾಗ್ರ ಬದಲಾವಣೆ ಮಾಡಿ ತಯಾರಿಸಿಕೊಡುವುದು ಇನ್ನೊಂದು ಹವ್ಯಾಸ.

******

# ಶತಮಾನೋತ್ಸವ ಸಂಭ್ರಮದಲ್ಲಿ ಮುಂಡಾಜೆ ಪಾಕ್ಸ್

**ಪೀಠಿಕೆ**

1857ರಲ್ಲಿ ದೇಶದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಆರಂಭವಾಗಿ ನಿರಂತರ ಸ್ವಾತಂತ್ರ್ಯಕ್ಕಾಗಿ ವಿಭಿನ್ನ ಚಳುವಳಿಗಳು ನಡೆಯುತ್ತಿದ್ದ ಕಾಲಘಟ್ಟವದು. ಯುರೋಪಿನಲ್ಲಿ "ಕೈಗಾರಿಕಾ ಕ್ರಾಂತಿ" ನಡೆದು ಸಹಕಾರಿ ಧ್ವಜದಡಿ ಪರಿಹಾರೋಪಾಯಗಳನ್ನು ಹುಡುಕುತ್ತಿದ್ದ ಸನ್ನಿವೇಶವದು. ಜರ್ಮನಿಯಲ್ಲಿ ಸುಮಾರು 1862ರಲ್ಲಿ ಬಟಾಟೆ ವಿತರಿಸುವವರಿಗಾಗಿಯೇ ಸಹಕಾರಿ ಸಂಘದ ಸ್ಥಾಪನೆಯಾದದು ಇದೇ ಹಿನ್ನೆಲೆಯಲ್ಲಿ ಭಾರತದಲ್ಲೂ ಸ್ವಾತಂತ್ರ್ಯ ಚಳುವಳಿಗಳು ನಡೆಯುತ್ತಿದ್ದರೂ ದೇಶದ ಸಾಮಾನ್ಯ ಜನತೆಯ ಆರ್ಥಿಕ ಸ್ಥಿತಿ ಏನೂ ಉತ್ತಮ ವಾಗಿರಲ್ಲಿಲ್ಲ. ಹಲವುವರ್ಗದ ಜನರಂತೂ ಉಳ್ಳವರ–ದಳ್ಳಾಳಿಗಳ ಕೃಪೆಯಲ್ಲೇ ಜೀವನ ನಡೆಸುವಂತಹ ಸ್ಥಿತಿ ಇತ್ತು. ಇಂತಹ ಸಂದರ್ಭದಲ್ಲೇ ಆಗಿನ ಬ್ರಿಟಿಷ್ ಸರಕಾರ ಇದರ ಪರಿಹಾರಕ್ಕಾಗಿ ಏನು ಮಾಡಬಹುದೆಂಬುದನ್ನು ಸೂಚಿಸಲು 2–3 ತಜ್ಞರ ಸಮಿತಿಗಳನ್ನು ರಚಿಸಿತು. ಇದರ ಶಿಫಾರಸುಗಳೇ ಯುರೋಪಿನಂತೇ ಇಲ್ಲೂ ಸಹಕಾರಿ ಸಂಸ್ಥೆಗಳ ಸ್ಥಾಪನೆಗೆ ನಾಂದಿಹಾಡಿತು. ಈ ಕ್ಷೇತ್ರದತ್ತ ಜನರಗಮನಹರಿದರೆ ಸ್ವಾತಂತ್ರ್ಯ ಚಳುವಳಿ ದುರ್ಬಲವಾಗಬಹುದೆನ್ನುವ ದುರಾಲೋಚನೆಯೂ ಆ ಬ್ರಿಟಿಷ್ ಸರಕಾರಕ್ಕಿದ್ದಂತೆ ಭಾಸವಾಗುತ್ತದೆ.

ಭಾರತ ದೇಶದ ಸಂಸ್ಕೃತಿ–ಪರಂಪರೆಯಲ್ಲಿ "ಸಹಕಾರ" ರಕ್ತಗತವಾಗಿಯೇ ಮೂಡಿಬಂದಿದೆ. ಹುಟ್ಟಿನಿಂದ ಸಾವಿನವರೆಗೂ "ಸಹಕಾರ"ದ ಅಸ್ಥಿತ್ವ ನಿರಂತರವಾಗಿ ಪುರಾಣ–ಇತಿಹಾಸ ಕಾಲಗಳಿಂದ ಇಂದಿನವರೆಗೂ ಮುಂದಕ್ಕೂ ಶಾಶ್ವತವಾಗಿ ಇರುವಂತಹುದು. ಆದರೂ ಸ್ವಲ್ಪ ದುರ್ಬಲ–ಪ್ರಬಲವಾಗುವಂತಹ ಸನ್ನಿವೇಶಗಳಲ್ಲಿ ಇದು ಹಾದುಹೋಗೂತ್ತಿರುತ್ತದೆ ಎಂಬುದೂ ಅಷ್ಟೇ ಸತ್ಯ.

ಈ ಎಲ್ಲಾ ಹಿನ್ನೆಲೆಗಳ ನಡುವೆ ಭಾರತ ದೇಶದಲ್ಲಿ ಪ್ರಥಮ ಸಹಕಾರೀ ಕಾನೂನು ಘೋಶಿತವಾದುದು 1904ರಲ್ಲಿ. ನಮ್ಮ ಪ್ರದೇಶ ಸೇರಿದ್ದ ಮದ್ರಾಸ್ ರಾಜ್ಯದಲ್ಲಿ 1912ರಲ್ಲಿ ಕಾನೂನು ಅಸ್ಥಿತ್ವಕ್ಕೆ ಬಂತು. ನಂತರ ಅಧಿಕೃತವಾಗಿ ಕಾನೂನುಬದ್ಧ ಸಹಕಾರಿ ಸಂಘಗಳು ಹುಟ್ಟಲಾರಂಭಿಸಿದವು.

ಈಗಿನ ಕಾಸರಗೋಡು ಸೇರಿದಂತೆ ಅವಿಭಜಿತ ದ. ಕ. ಜಿಲ್ಲೆಯಲ್ಲಿ 19ನೇ ಶತಮಾನದ ಆರಂಭದಲ್ಲಿ ಖ್ಯಾತ ನ್ಯಾಯವಾದಿಯೂ, ಜಿಲ್ಲಾ ಬೋರ್ಡಿನಲ್ಲೂ ಸಕ್ರಿಯ ನೇತೃತ್ವ ವಹಿಸುತ್ತಿದ್ದ ಮೊಳಹಳ್ಳಿ ಶಿವರಾಯರು "ಸಹಕಾರ ಚಳುವಳಿ"ಯ ಬಗ್ಗೆ ಅಪಾರ ವಿಶ್ವಾಸ, ನಂಬಿಕೆ ಇರಿಸಿ ಈ ನಾಡಿನ ಮೂಲೆ ಮೂಲೆಗಳಲ್ಲಿ ಎಲ್ಲರ ಸಹಕಾರ ಬೆಂಬಲಗಳಿಂದ ಅಪಾರ ಸಂಖ್ಯೆಯಲ್ಲಿ ಕ್ರೆಡಿಟ್, ಮಾರ್ಕೆಟಿಂಗ್, ಕನ್ಸೂಮರ್ಸ್ ಹೀಗೆ ವಿವಿಧ ರೀತಿಯ ಸಹಕಾರಿ ಸಂಸ್ಥೆಗಳನ್ನು ಕಟ್ಟಿ ಬೆಳೆಸಿ "ಸಹಕಾರಿ ಪಿತಾಮಹ"ಎಂಬ ಗೌರವಕ್ಕೆ ಪಾತ್ರರಾದರು. ಈ ಸಹಕಾರಿ ಪಿತಾಮಹ ಮಳಹಳ್ಳಿಯವರಿಂದಲೇ ಹುಟ್ಟುಹಾಕಲ್ಪಟ್ಟ ಸಂಸ್ಥೆ ನಮ್ಮ ಮುಂಡಾಜೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘವೆಂಬುದು ನಮ್ಮ ಹೆಗ್ಗಳಿಕೆ.

ಗುಂಡಿ ಲಕ್ಷ್ಮೀನಾರಾಯಣ ದೇವರ ಸನ್ನಿಧಿಯಲ್ಲಿ 03.04.1921ರಂದು ಹುಟ್ಟಿದ ಮುಂಡಾಜೆ ಸಹಕಾರಿ ಸಂಘದ ಸ್ಥಾಪಕ ಅಧ್ಯಕ್ಷರು N. P. ಖಾಡಿಲ್ಕರ್ ಹಾಗೂ ಸ್ಥಾಪಕ ಗೌರವ ಕಾರ್ಯದರ್ಶಿ ಭಿಡೆ ನಾರಾಯಣ ಭಟ್‌ರವರು ಕೃಷಿಕರಿಗೆ ಸಾಲನೀಡುತ್ತ ಮುಂಡಾಜೆ–ಕಲ್ಮಂಜ ಗ್ರಾಮ ವ್ಯಾಪ್ತಿ ಹೊಂದಿದ್ದ ಸಂಸ್ಥೆ ಜಾಗತಿಕ ಮಹಾಯುದ್ಧ ಕಾಲದಲ್ಲಿ "ರೇಶನ್"(ಪಡಿತರ)ಕ್ಕೂ ಪರದಾಡಬೇಕಾದ್ದ ಸ್ಥಿತಿಯಲ್ಲಿದ್ದಾಗ ರೇಶನ್ ಪೂರೈಕೆಯ ಜವಾಬ್ದಾರಿಯನ್ನೂ ಹೊತ್ತಿತ್ತು. 1942–1943ರಿಂದ ಪುನಃ ಚಾರ್ಮಾಡಿ, ಚಿಬಿದ್ರೆ, ತೋಟತ್ತಾಡಿ, ನೆರಿಯಗ್ರಾಮಗಳಿಗೆ ವ್ಯಾಪ್ತಿಯನ್ನು ವಿವಿಧೋದ್ದೇಶ ಸಹಕಾರಿ ಸಂಘವಾಗಿ ವಿಸ್ತರಿಸಿಕೊಂಡು ಬೆಳೆಯಿತು.

1969ರಿಂದ ಮುಂಡಾಜೆ ಸಿ.ಎ. ಬ್ಯಾಂಕ್ ಆಗಿ ಹೆಸರು ಬದಲಿಸಿಕೊಂಡು ಬೆಳೆಯಿತು. ಈಗಲೂ ಸಿ.ಎ.

ಬ್ಯಾಂಕ್ ಎಂದೇ ಜನಮಾನಸದಲ್ಲಿ ನೆಲೆಯಾಗಿದೆ. ಮುಂಡಾಜೆ, ನೆರಿಯ, ಕಕ್ಕಿಂಜೆ, ಚಾರ್ಮಾಡಿ, ಕಲ್ಮಂಜ ಸೋಮಂತಡ್ಕಗಳಲ್ಲಿ ಸ್ವಂತ ನಿವೇಶನಗಳಿವೆ. ನೆರಿಯ, ಕಕ್ಕಿಂಜೆ, ಸೋಮಂತಡ್ಕಗಳಲ್ಲಿ ಪೂರ್ಣಪ್ರಮಾಣದ ಶಾಖೆಗಳೂ ಮುಂಡಾಜೆಯಲ್ಲಿ ಕೇಂದ್ರ ಕಛೇರಿ ಇದೆ. ಚಾರ್ಮಾಡಿ ನಿಡ್ಗಲ್‌ಗಳಲ್ಲಿ ಪಡಿತರ ವಿತರಣಾ ಕೇಂದ್ರಗಳಿವೆ. ನಮ್ಮ ಸಂಘವು ಸದಸ್ಯರ ಅಡಿಕೆ, ಕ್ಕೊಕ್ಕೋ ರಬ್ಬರ್ ಖರೀದಿ ಮಾಡುತ್ತಿದೆ. ಕೃಷಿ, ಕೃಷಿಯೇತರ ಹಾಗೂ ಸ್ವಸಹಾಯ ಸಂಘಗಳಿಗೂ ಸಾಲಸೌಲಭ್ಯ ನಿಡುತ್ತಿದೆ. 2012ರ ಅಂತರಾಷ್ಟೀಯ ಸಹಕಾರಿ ವರ್ಷದಲ್ಲಿ ಪ್ರಾರಂಭಿಸಿದ "ಋಣಮುಕ್ತ ಕೃಷಿಕ"ನನ್ನು ಕಾಣುವ ಕನಸಿನೊಂದಿಗೆ ಪ್ರಾರಂಭವಾದ ಕೃಷಿ ಸಾಲ ತೀರುವಳಿ ಯೋಜನೆ (KSTY–2012) ಅತ್ಯಂತ ವೈಶಿಷ್ಯಪೂರ್ಣ ವಾಗಿದ್ದರೂ ಸರಕಾರಗಳ ಬೆಂಬಲವಿಲ್ಲದೆ ಸೊರಗುತಾ ಮುಂದುವರಿದಿದೆ.

ಕೊವಿಡ್–19 ಆರಂಭವಾಗುವ ವರೆಗೂ ಸತತ 7 ವರ್ಷಗಳಲ್ಲಿ ಎಲ್ಲಾಸಾಲಗಳ 100% ವಸೂಲಾತಿ, ನಿರಂತರಲಾಭ, "A" ವರ್ಗದ ಆಡಿಟ್ ವರ್ಗೀಕರಣ ಈ ಸಂಘದ ಸಾಧನೆ.

ಇದೀಗ ಶತಮಾನೋತ್ಸವದ ನೆನಪಿನಲ್ಲಿ "ಶತಮಾನೋತ್ಸವ ಸಂಕೀರ್ಣ" ಲೊಕಾರ್ಪಣೆ, ಕೃಷಿಕರಿಗಾಗಿ ಹೊಸದಾಗಿ ನರ್ಸರಿ ಸ್ಥಾಪನೆ, ಆರೋಗ್ಯ ಶಿಬಿರಗಳು, ಆತ್ಮನಿರ್ಭರ ಭಾರತ ಪರಿಕಲ್ಪನೆಯಲ್ಲಿ ಸ್ವ ಉದ್ಯೋಗಕ್ಕಾಗಿ ಕೌಶಲ್ಯ ಅಬಿವೃದ್ಧಿ ತರಬೇತಿ ಶಿಬಿರಗಳು, ಸ್ವಚ್ಛ ಭಾರತ ಅಭಿಯಾನ ಅನುಷ್ಠಾನದಲ್ಲಿ ಸಹಕರಿಸುವುದು, ಪರಿಸರ ಸಂರಕ್ಷಣೆ, ಅಂರ್ಜಲ ಅಬಿವೃದ್ಧಿಗಾಗಿ ದುಡಿಯುವುದು, ಹೀಗೆಲ್ಲಾ ಶತಮಾನದ ಕೊಡುಗೆಯಾಗಿ ದುಡಿಯಲು ಸಂಘ ನಿರ್ಧರಿಸಿದೆ.

ಸಂಘದಲ್ಲಿ ದುಡಿದ ಮಹನೀಯರ ವಿವರ ಇನ್ನಿತರ ಸಾಧನೆಗಳ ವಿವರ ಪ್ರತ್ಯೇಕವಾಗಿ ಸದಸ್ಯರ ಮುಂದಿಡಲಿರುವುದರಿಂದ ಈ "ಪ್ರಾಸ್ತಾವಿಕ" ಪೀಠಿಕೆ ಇಷ್ಟೇ ಸಂಕ್ಷೇಪ್ತವಾಗಿ ತಮ್ಮ ಮುಂದಿರಿಸಬಯಸುತ್ತೇವೆ.

## ಶತಮಾನದ ಸಾಧನೆಯ ಪಕ್ಷಿನೋಟ

ದಿನಾಂಕ 16.01.1921ರಲ್ಲಿ ನೋಂದಾಯಿತಗೊಂಡದ್ದು ದಿನಾಂಕ 03.04.1921ರಲ್ಲಿ ಮುಂಡಾಜೆ ವ್ಯವಸಾಯಿಕ ಸಂಘವಾಗಿ ಗುಂಡಿ ಲಕ್ಷ್ಮೀನಾರಾಯಣ ದೇವಸ್ಥಾನದ ಹೊರಚಾವಡಿಯಲ್ಲಿ ಆರಂಭಗೊಂಡಿತು. ಈ ಸಂಘವು ಮುಂಡಾಜೆ ಹಾಗೂ ಕಲ್ಮಂಜ ಗ್ರಾಮಗಳ ವ್ಯಾಪ್ತಿಯನ್ನು ಹೊಂದಿತ್ತು.

ಸ್ಥಾಪಕಾಧ್ಯಕ್ಷರು: ಗುಂಡಿ ನಾರಾಯಣ ಪದ್ಮನಾಭ ಖಾಡಿಲ್ಕಾರ್

ಕಾರ್ಯದರ್ಶಿ: ಭಿಡೆ ನಾರಾಯಣ ಭಟ್

ಸ್ಥಾಪಕ ಸಮಿತಿಯ ಇತರ ಸದಸ್ಯರುಗಳು:

1. ಮಾಣಿ ಅನಂತ ಭಟ್ 2.ಎಚ್.ಬಿ. ಪಟವರ್ಧನ್

3. ಕೆ.ಜಿ. ನರಸಿಂಹ ಭಟ್

## ಸ್ಥಾಪನೆಗೆ ಸಹಕರಿಸಿದ ಇತರ ಮಹನೀಯರು

ಗುದ್ಲಿ ವೆಂಕಟೇಶ ಭಟ್, ಧುಂಬೆಟ್ಟು ಮಹಾದೇವ ಹೆಬ್ಬಾರ್, ಶೇಷ ಭಟ್ ಭಿಡೆ, ಮಾಣಿ ಗಣಪತಿ ಭಟ್ , ಬಿಡೆ ಪದ್ಮನಾಭ ಭಟ್, ಎಮ್ ಎನ್. ಭಿಡೆ

1933–36ರ ವರೆಗೆ ಗೋರೆ ಅನಂತ ಭಟ್ ಅಧ್ಯಕ್ಷರಾಗಿ ಹಾಗೂ M. ಸುಬ್ರಾಯ ಭಟ್ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿರುತ್ತಾರೆ. ಈ ಕಾಲದಲ್ಲಿ ಸಂಘಕ್ಕೆ ಸ್ವಂತ ಕಟ್ಟಡ ಇರಲಿಲ್ಲ. ನೌಕರರೂ ಇರಲಿಲ್ಲ. ಎಲ್ಲವೂ ಗೌರವಾನ್ವಿತ ರೀತಿಯಲ್ಲಿ ನಡೆಯುತ್ತಿತ್ತು. ಯುದ್ಧದ ದೆಸೆಯಿಂದ ಹಾಗೂ ಕೊಳೆರೋಗದಿಂದಾಗಿ ಅಡಿಕೆ ತೋಟಗಾರರು ಭೀಕರ ಸಂಕಷ್ಟವನ್ನೆದುರಿಸಬೇಕಾಯಿತು. ಆಗ ಇವರನ್ನು ಆರ್ಥಿಕವಾಗಿ ಸಂರಕ್ಷಿಸಿದ್ದು ಈ ಸಂಘವೇ ಆಗಿದೆ. 1921–45ರವರೆಗೆ ಸಹಕಾರಿ ಪಿತಾಮಹ ಮೊಳಹಳ್ಳಿ ಶಿವರಾಯರು ನಮ್ಮ ಸಂಘದ ನಿರಂತರ ಸಂಪರ್ಕದಲ್ಲಿದ್ದರು. ಭಿಡೆ ಮನೆತನದ ಜಿ.ಯನ್ ಭಿಡೆಯವರು ಉಚಿತವಾಗಿ ನೀಡಿದ ನಿವೇಶನದಲ್ಲಿ ಸ್ವಂತ ಕಟ್ಟಡವನ್ನು ಕಟ್ಟಿ 1942ರಲ್ಲಿ ಮೊಳಹಳ್ಳಿ ಶಿವರಾಯರು ಉದ್ಘಾಟಿಸಿದ್ದು ಇತಿಹಾಸ. 1960ರಲ್ಲಿ ರತ್ನವರ್ಮಹೆಗ್ಗಡೆಯವರು ತೋಟತ್ತಾಡಿಯಲ್ಲಿ ಉಚಿತವಾಗಿ ಕೊಟ್ಟ ನಿವೇಶನದಲ್ಲಿ ಗೋದಾಮು ನಿರ್ಮಾಣವಾಯಿತು. ಒ.ಉ ಫಡ್ಕೆಯವರ ಆಡಳಿತಾವಧಿಯಲ್ಲಿ 100ಟನ್ ಶೇಖರಣಾ ಸಾಮರ್ಥ್ಯದ ಗೋದಾಮನ್ನು ನಿರ್ಮಿಸಲಾಯಿತು. 1973ರಲ್ಲಿ ಸುವರ್ಣ ಮಹೋತ್ಸವವನ್ನು ಆಚರಿಸಲಾಯಿತು. ದಿನಾಂಕ 06–02–1983ರಲ್ಲಿ ಕಕ್ಕಿಂಜೆಯಲ್ಲಿ ಪ್ರಥಮವಾಗಿ ಸರಕಾರದ ಯನ್ ಆರ್.ಇ.ಪಿ. (NREP) ಯೋಜನೆಯಲ್ಲಿ ಸರಕಾರ ದಿಂದ ಮಂಜುರಾಗಿರುವ 0.30 ಸೆಂಟ್ಸ್ ವಿಸ್ತೀರ್ಣದ ನಿವೇಶನದಲ್ಲಿ ಸ್ವಂತ ಕಟ್ಟಡ ನಿರ್ಮಾಣಗೊಂಡಿತು. ಅದೇ ಕಟ್ಟಡದಲ್ಲಿ ಚಾರ್ಮಾಡಿ, ಚಿಬಿದ್ರೆ, ತೋಟತ್ತಾಡಿ ನೆರಿಯ ಗ್ರಾಮದ ಸದಸ್ಯರಿಗೆ ಅನುಕೂಲವಾಗುವಂತೆ ಶಾಖೆ ಪ್ರಾರಂಭವಾಯಿತು.

ಪ್ರಧಾನ ಕಛೇರಿಯ ವ್ಯವಹಾರವು ಮುಂಡಾಜೆಯ ಹಳೆ ಕಟ್ಟಡದಲ್ಲಿ ನಡೆಯುತ್ತಿದ್ದು, ವ್ಯವಹಾರದ ಅನುಕೂಲತೆಗಾಗಿ

ಯನ್.ಸಿ.ಡಿ.ಸಿ (NCDC) ಯೋಜನೆಯಲ್ಲಿ ಕಛೇರಿ ಗೋದಾಮು ಕಟ್ಟಡ ನಿರ್ಮಾಣವಾಗಿ ದಿನಾಂಕ 18–05–1988ರಲ್ಲಿ ಉದ್ಘಾಟನೆಗೊಂಡಿತು. ಸದಸ್ಯರ ಅನುಕೂಲತೆಗಾಗಿ ಸಂಘದ ಮೂಲಕ 26–11–1990ರಲ್ಲಿ ಕ್ಯಾಂಪ್ಕೋದವರು ವಾರದಲ್ಲೊಮ್ಮೆ ಅಡಿಕೆ ಹಾಗೂ ಕೊಕ್ಕೋ ಖರೀದಿ ಆರಂಭಿಸಿದ್ದಾರೆ. ನೆರಿಯ ಗ್ರಾಮದಲ್ಲಿ ವ್ಯವಹಾರ ಅಭಿವೃದ್ಧಿಗೆ ಅವಕಾಶ ಇರುವುದನ್ನು ಮನಗಂಡು 1997ರಲ್ಲಿ ಬಾಡಿಗೆ ಕಟ್ಟಡದಲ್ಲಿ ಭಾಗಶಃ ವ್ಯವಹಾರ ಪ್ರಾರಂಭವಾಗಿದೆ. ಅದೇ ಗ್ರಾಮದಲ್ಲಿ ಸ್ವಂತ ನಿವೇಶನಕ್ಕಾಗಿ ಅಂದಿನ ನಿರ್ದೇಶಕರಾಗಿದ್ದ ಶಾಂತಪ್ಪ ಗೌಡ ರವರ ಸ್ವಾಧೀನತೆಯಲ್ಲಿದ್ದ ಸ್ಥಳವನ್ನು ನಿರಾಪೇಕ್ಷಣಿ ಪತ್ರದ ಮೂಲಕ 0.10 ಸೆಂಟ್ಸ್ ನಿವೇಶನವನ್ನು ಸಂಘದ ಹೆಸರಿಗೆ ಮಂಜೂರಾಗಿ, ಸ್ವಂತ ಸಂಪನ್ಮೂಲದಿಂದ ಕಛೇರಿ ಗೋದಾಮುಕಟ್ಟಡ ನಿರ್ಮಾಣವಾಗಿ ದಿನಾಂಕ 17–05–2005ರಂದು ಉದ್ಘಾಟನೆಗೊಂಡು ವ್ಯವಹಾರವು ನೂತನ ಕಟ್ಟಡಕ್ಕೆ ಸ್ಥಳಾಂತರಗೊಂಡಿದೆ.

ಸದಸ್ಯರಿಗೆ ಅನುಕೂಲವಾಗುವಂತೆ ರಬ್ಬರ್ ಬೆಳೆಗಾರರ ಸಹಕಾರಿ ಮಾರಾಟ ಸಂಘ ಉಜಿರೆಯ ಮೂಲಕ ನೆರಿಯ ಶಾಖೆಯಲ್ಲಿ ದಿನಾಂಕ 17–05–2005 ರಬ್ಬರ್ ಖರೀದಿ ಆರಂಭಿಸಲಾಯಿತು. ಸದಸ್ಯರಿಗೆ ಅನುಕೂಲವಾಗುವಂತೆ ರಬ್ಬರ್ ಬೆಳೆಗಾರರ ಸಹಕಾರಿ ಮಾರಾಟ ಸಂಘ ಉಜಿರೆಯ ಮೂಲಕ ಕಕ್ಕಿಂಜೆ ಶಾಖೆಯಲ್ಲಿಯೂ ಮತ್ತೆ ರಬ್ಬರ್ ಖರೀದಿ ಆರಂಭಿಸಲಾಯಿತು. ಸದಸ್ಯರ ಅನುಕೂಲತೆಯ ದೃಷ್ಟಿಯಿಂದ ದಿನಾಂಕ 31–03–2011ರಂದು ಮುಂಡಾಜೆ ಹಾಲು ಉತ್ಪಾದಕರ ಸಹಕಾರ ಸಂಘ (ನಿಯಮಿತ) "ಕಾಮಧೇನು" ಕಟ್ಟಡದ ಒಂದು ಭಾಗವನ್ನು ಬಾಡಿಗೆ ರೂಪದಲ್ಲಿ ಪಡಕೊಂಡು ಪ್ರಧಾನ ಕಛೇರಿಯಲ್ಲಿ ಕೆಲವೊಂದು ವ್ಯವಹಾರವನ್ನು ಉಳಿಸಿಕೊಂಡು "ಠೇವಣಿ, ಸಾಲದ ಖಾತೆ ಇತ್ಯಾದಿ ವ್ಯವಹಾರ ಸ್ಥಳಾಂತರಗೊಂಡಿದೆ. ಅಂತರಾಷ್ಟ್ರೀಯ ಸಹಕಾರಿ ವರ್ಷದ 2012ರ ವಿಶೇಷ ಕೊಡುಗೆಯಾಗಿ ಕೃಷಿಕ ಸದಸ್ಯರ "ಕೃಷಿ ಸಾಲ ತೀರುವಳಿ" ಯೋಜನೆ ಅನುಷ್ಠಾನಗೊಂಡಿತು. ಕಕ್ಕಿಂಜೆಯಲ್ಲಿ ವ್ಯವಹಾರವು ಅಭಿವೃದ್ಧಿ ಹೊಂದಿರುವುದರಿಂದ ಸುಸಜ್ಜಿತ ಹೊಸ ಕಟ್ಟಡದ ಅವಶ್ಯಕತೆ ಕಂಡುಬಂದು ಸದ್ರಿ ನಿವೇಶನದಲ್ಲಿ ಯನ್.ಸಿ.ಡಿ.ಸಿ. (NCDC) ಯೋಜನೆಯಲ್ಲಿ "ಗೋದಾಮು ಮತ್ತು ಕಾರ್ಯದರ್ಶಿ ವಸತಿಗೃಹ ಶಾಖಾ ಕಛೇರಿ"ಗೆ ಅನುಕೂಲವಾಗುವಂತೆ ಕಟ್ಟಡ ನಿರ್ಮಾಣವಾಗಿ ದಿನಾಂಕ 02–03–2014 ಉದ್ಘಾಟನೆಗೊಂಡು, ಹಳೆಯ ಯನ್ಆರ್ಇಪಿ ಕಟ್ಟಡದಿಂದ ಹೊಸಕಟ್ಟಡಕ್ಕೆ ಸ್ಥಳಾಂತರಗೊಂಡು ವ್ಯವಹಾರ ನಿರ್ವಹಿಸುತ್ತಿದ್ದೇವೆ. ಅಖಿಲ ಭಾರತ ಸಹಕಾರಿ ಸಪ್ತಾಹ 2016ರಲ್ಲಿ ಸಂಘವು ಸದಸ್ಯರಿಗೆ "ಪಿಂಚಣಿ ಯೋಜನೆಯನ್ನು ಅನುಷ್ಠಾನ ಗೊಳಿಸಿದೆ. ಸದಸ್ಯರ ಅನುಕೂಲತೆಗಾಗಿ ಕಲ್ಮಂಜ ಗ್ರಾಮದ ನಿಡ್ಗಲ್‌ನಲ್ಲೂ ಶಾಖೆ ಆರಂಭಿಸಿದ್ದು ಪ್ರಕೃತ ಕಲ್ಮಂಜ ಪಂಚಾಯತ್ ಕಟ್ಟಡದಲ್ಲಿ ವ್ಯವಹಾರ ನಡೆಸುತ್ತಿದೆ. ಕೋವಿಡ್ ಸಂದರ್ಭದಲ್ಲಿ ನಮ್ಮ ಗ್ರಾಮದಲ್ಲಿ ದುಡಿದ ಆಶಾಕಾರ್ಯಕರ್ತೆ (ಕೋವಿಡ್ ವಾರಿಯರ್ಸ್) ಇವರನ್ನು ಸಂಘದ ಮೂಲಕ ಸನ್ಮಾನಿಸಲಾಯಿತು.

ಮುಂಡಾಜೆ ಕೃಷಿ ಪತ್ತಿನ ಸಹಕಾರಿ ಸಂಘದ ಶತಮಾನೋತ್ಸವದ ಸವಿನೆನಪಿನಲ್ಲಿ "ಆತ್ಮನಿರ್ಭರ ಭಾರತ" ಪರಿಕಲ್ಪನೆಯಡಿಯಲ್ಲಿ ವಿವಿಧ ಸಂಘಸಂಸ್ಥೆಗಳ ಸಹಯೋಗದಲ್ಲಿ "ಉದ್ಯೋಗ ನೈಪುಣ್ಯ ತರಬೇತಿ' ಶಿಬಿರವು ವಿವೇಕಾನಂದ ವಿದ್ಯಾವರ್ಧಕ ಸಂಘ ಮುಂಡಾಜೆ ಇದರ ವಠಾರದಲ್ಲಿ ಹಾಗೂ ಸಹಭಾಗಿತ್ವದಲ್ಲಿ ದಿನಾಂಕ 18–12–2020ರಿಂದ 23–12–2020ರವರೆಗೆ ನಡೆಯಿತು. ಈ ಕೆಳಗಿನ ವಿಷಯಗಳಲ್ಲಿ ಕೌಶಲ್ಯ ತರಬೇತಿ ನಿಡಲಾಯಿತು.

1. ಫ್ಯಾಷನ್ ಡಿಸೈನಿಂಗ್ 2. ಜೇನು ಕೃಷಿ 3. ಕೃಷಿ ಯಂತ್ರೋಪಕರಣಗಳ ದುರಸ್ತಿ ಮತ್ತು ಬಳಕೆ 4. ಕೃಷಿ ಕಸಿ ಮತ್ತು ನರ್ಸರಿ 5. ಫುಡ್ ಟೆಕ್ನೋಲಜಿ. ನೂರಾರು ಮಂದಿ ಯುವ ಜನತೆ ಸೇರಿದಂತೆ ಹಲವಾರು ಕೃಷಿಕರೂ ತರಬೇತಿ ಪಡೆದು ಶಿಬಿರವನ್ನು ಯಶಸ್ವಿಗೊಳಿಸಿರುತ್ತಾರೆ.

ನಮ್ಮ ಸಂಘವು ದಿನೇದಿನೇ ಪ್ರಗತಿ ಪಥದಲ್ಲಿ ಅಭಿವೃದ್ಧಿಗೊಳ್ಳುತ್ತಿದ್ದು ಇದಕ್ಕೆಪೂರಕವಾಗಿ ಸದಸ್ಯರಿದ್ದಲ್ಲಿಗೇ ಬಂದು ಒಂದು ಸುಸಜ್ಜಿತ ಕಟ್ಟಡ ನಿರ್ಮಿಸುವ ಸಂಕಲ್ಪ ಮಾಡಲಾಯಿತು. 22–10–2018ರಂದು ಆಗಿನ ಆಡಳಿತ ಮಂಡಳಿಯು ಹೆದ್ದಾರಿಯ ಬದಿಯಲ್ಲಿ ಸೂಕ್ತ ನಿವೇಶನವನ್ನು ಖರೀದಿಸುವ ಬಗ್ಗೆ ನಿರ್ಣಯಕೈಗೊಂಡಿತು. ಸೋಮಂತಡ್ಕದಲ್ಲಿ ಪ್ರಶಸ್ತ ಸ್ಥಳದಲ್ಲಿ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲೇ 0.23 ಸೆಂಟ್ಸ್ ನಿವೇಶನ ಲಭ್ಯವಾಗಿದ್ದು ಸದ್ರಿ ನಿವೇಶನವನ್ನು 2019ರಲ್ಲಿ ಖರೀದಿಸಲಾಯಿತು. ಸುಸಜ್ಜಿತ ಹೊಸ ಕಟ್ಟಡದ ನಿರ್ಮಾಣಕ್ಕೆ 12–12–2019ರ ಗುರುವಾರ ಶಂಕುಸ್ಥಾಪನೆ ಮಾಡಲಾಯಿತು. ಇಂದು ತಾರೀಕು 21–02–2021ರಂದು ಪೂರ್ಣಗೊಂಡ ಈ ಹೊಸ ಸುಸಜ್ಜಿತ ಕಟ್ಟಡ "ಶತಮಾನೋತ್ಸವ ಸಂಕೀರ್ಣ" ಲೋಕಾರ್ಪಣೆ ಗೊಳ್ಳುತ್ತಿರುವುದು ಸಂಘದ ಸದಸ್ಯರುಗಳಾದ ನಮಗೆಲ್ಲಾ ಹೆಮ್ಮೆಯ ವಿಚಾರ. ಈಘಟನೆಯು ಮುಂಡಾಜೆ ಗ್ರಾಮದ ಅಭಿವೃದ್ಧಿ ಪಥದಲ್ಲಿ ಸುವರ್ಣಾಕ್ಷರಗಳಿಂದ ನಮೂದಿಸಬಹುದಾದ ಚಾರಿತ್ರಿಕ ಅಂಶ.

ಈ ಸಂದರ್ಭದಲ್ಲಿ ನಮ್ಮ ಸಂಘದ ಸ್ಥಾಪನೆ ಹಾಗೂ ಏಳುಬೀಳುಗಳಲ್ಲಿ ಹಿಗ್ಗದೆ ಅಥವಾ ಕುಗ್ಗದೆ ಸ್ಥಿತಪ್ರಜ್ಞರಾಗಿ

ದುಡಿದು, ಗತಿಸಿಹೊದ ಹಿರಿಯಚೇತನಗಳನ್ನು ಗೌರವ ಪೂರ್ಣವಾಗಿ ನೆನೆಯುವುದು ನಮ್ಮಗಳ ಆದ್ಯ ಕರ್ತವ್ಯ.

ಅಖಿಲ ಭಾರತ ಸಹಕಾರಿ ಸಪ್ತಾಹ ವಿವಿಧ ಕಾರ್ಯಕ್ರಮಗಳೊಂದಿಗೆ ಪ್ರತಿವರ್ಷ ಆಚರಿಸಲಾಗುತ್ತದೆ ಹಾಗೂ ಪ್ರತಿ ಗ್ರಾಮಗಳಿಂದ ಹಿರಿಯ ಸದಸ್ಯರುಗಳನ್ನು ಗೌರವಿಸಿ ಅಭಿನಂದಿಸುವ ಸಂಪ್ರದಾಯ ಮುಂದು ವರಿಸಿದ್ದೇವೆ.

ಸಂಘವು ನಬಾರ್ಡ ಪ್ರಾಯೋಜಿತ 4 ರೈತ ಸೇವಾ ಕೂಟಗಳನ್ನು ಸ್ಥಾಪಿಸಿದ್ದು ಅವು ಈ ಕೆಳಗಿನಂತಿವೆ.

ಅನುಗ್ರಹ ರೈತ ಸೇವಾ ಕೂಟ (ಚಾರ್ಮಾಡಿ ಪಂಚಾಯತ್ ಕ್ಷೇತ್ರ ಅಧ್ಯಕ್ಷರಾಗಿ ಡಿ.ಎ ರೆಹಿಮನ್), ಸಂಪದ ರೈತಸೇವಾಕೂಟ (ನೆರಿಯ ಪಂಚಾಯತ್ ಕ್ಷೇತ್ರ–ಅಧ್ಯಕ್ಷರಾಗಿ ಬಾಲಕೃಷ್ಣ ಗೌಡ, ಸಂಗಮ ರೈತ ಸೇವಾ ಕೂಟ (ಕಲ್ಮಂಜ ಪಂಚಾಯತ್ ಕ್ಷೇತ್ರ – ಅದ್ಯಕ್ಷರಾಗಿ ಟಿ ಸತೀಶ್), ಮೃತ್ಯುಂಜಯ ರೈತ ಸೇವಾಕೂಟ (ಮುಂಡಾಜೆ ಪಂಚಾಯತ್ ಕ್ಷೇತ್ರ– ಅಧ್ಯಕ್ಷರಾಗಿ ಕಂಠೀರವ ನವಾಥೆ) ಕರ್ತವ್ಯ ನಿರ್ವಹಿಸುತ್ತಿವೆ.

ಪ್ರತಿ ವರ್ಷವೂ ನಿಗದಿತ ಸಮಯದಲ್ಲಿ ಸರ್ವಸದಸ್ಯರ ಮಹಾ ಸಭೆಯನ್ನು ಏರ್ಪಡಿಸಲಾಗುತ್ತದೆ. ಸದ್ರಿ ಸಭೆಯಲ್ಲಿ ಚರ್ಚಿತ ವಿಷಯಗಳನ್ನು ದಾಖಲಿಸಿ ಅನುಷ್ಠಾನ ಗೊಳಿಸಲಾಗುತ್ತದೆ.

ನಮ್ಮ ಸಂಘದಲ್ಲಿ 485 ನೊಂದಾಯಿತ ಸ್ವಸಹಾಯ ಗುಂಪುಗಳಿವೆ ಹಾಗೂ ರೂ. 1,66,37,000/–ರಷ್ಟು ಮೊತ್ತದ ಸಾಲ ವಿತರಿಸಲಾಗಿದೆ.

ಸ್ವಚ್ಛತೆ–ನೆಲ–ಜಲ–ಪರಿಸರಗಳ ಬಗ್ಗೆ ಕಾಳಜಿಯನ್ನು ಹೊಂದಿರುವ ನಾವು ಪ್ರತಿವರ್ಷವು ಆಯಾಯ ಋತುಮಾನಗಳಲ್ಲಿ ಇವುಗಳ ರಕ್ಷಣೆಯ ಬಗ್ಗೆ ವಿಭಿನ್ನ–ವಿಶಿಷ್ಟ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದ್ದೇವೆ.

ಸಂಘವು ಅಭಿವೃದ್ಧಿ ಪಥದಲ್ಲಿ ಲಾಭದಾಯಕವಾಗಿ ನಡೆಯುವಂತೆ ನಮಗೆ ಸಹಕಾರ ನೀಡಿದ ರಾಜ್ಯ ಸಹಕಾರಿ ಮಹಾಮಂಡಳದ ಅಧ್ಯಕ್ಷ ಹಾಗೂ ಜಿಲ್ಲಾ ಕೇಂದ್ರ ಸಹಕಾರಿ ಬೇಂಕಿನ ಅಧ್ಯಕ್ಷರಾದ 'ಸಹಕಾರಿ ರತ್ನ' ಡಾ. ರಾಜೇಂದ್ರ ಕುಮಾರರಿಗೆ ಹೃತ್ಪೂರ್ವಕ ವಂದನೆಗಳು. ಸಹಕಾರಿ ಇಲಾಖಾ ಅಧಿಕಾರಿಗಳಿಗೆ, ಲೆಕ್ಕಪರಿಶೋಧಕರಿಗೆ, ಕ್ಯಾಂಪ್ಕೋ, ರಬ್ಬರ್ ಸೊಸೈಟಿ ಉಜಿರೆ, ಸಮಸ್ತ ಸದಸ್ಯ ಗ್ರಾಹಕ ಬಂಧುಗಳಿಗೆ, ನೌಕರ ವರ್ಗಕ್ಕೆ, ಹೃತ್ಪೂರ್ವಕ ವಂದನೆಗಳು.

******

## ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ

## 100 ವರ್ಷಗಳ ಅಭಿವೃದ್ಧಿ ಪಥದ ಒಂದು ಪಕ್ಷಿನೋಟ

**ತುಲನಾತ್ಮಕ ಅಭಿವೃದಿ ತಃಖ್ತೆ (ರೂ–ಗಳಲ್ಲಿ)**

| ವರುಷ | ಸದಸ್ಯರು | ಪಾಲು ಬಂಡವಾಳ | ಠೇವಣಾತಿಗಳು | ಕೇ. ಸ. ಬೇ ಸಾಲ | ಸ. ಹೊ ಬೇ ಸಾಲ | ಲಾಭ– ನಷ್ಟ | ಆಡಿಟ್ ವರ್ಗೀಕರಣ |
|---|---|---|---|---|---|---|---|
| 1921–50 | 107 | 2169 | 15105 | 27721 | 27188 | 341 | |
| 1951–80 | 1491 | 327776 | 348778 | 1125855 | 1628148 | 34811 | |
| 1981–91 | 1539 | 1255000 | 3656104.17 | 2444258 | 5227933 | 50161.71 | |
| 1992–2000 | 1810 | 3600000 | 27002898.29 | 9078753.00 | 29696793 | 508497.68 | |
| 2001–2010 | 2873 | 8737920 | 139653487 | 54497236 | 139653487 | 4072573.10 | A |
| 2011–2015 | 3810 | 22797420 | 289602710.81 | 129869750 | 364311785 | 5161528.47 | A |
| 2016 | 4293 | 26453520 | 343134485.2 | 123081375 | 410858632 | 5714067.54 | A |
| 2017 | 4600 | 28955618 | 373494855.25 | 118917712 | 420412569 | 6166074.49 | A |
| 2018 | 4900 | 36576193 | 409309765.7 | 207447600 | 497504338 | 6332304.67 | A |
| 2019 | 5177 | 40082413 | 431778112.3 | 182570176 | 535841352 | 7389659.93 | A |
| 2020 | 5436 | 43635018 | 476096921.49 | 200311208 | 580623598 | 8400796.09 | A |

### ಅಧ್ಯಕ್ಷರುಗಳಾಗಿ ಸೇವೆಸಲ್ಲಿಸಿದವರು/ ಸಲ್ಲಿಸುತ್ತಿರುವವರು

1. ಕೆ.ಜಿ. ನರಸಿಂಹ ಭಟ್ 1926–33
2. ಗೋರೆ ಅನಂತ ಭಟ್ 1933–36
3. ಜಿ.ಎನ್.ಭಿಡೆ 1937–42
4. ಅರ್.ಜಿ.ಫಡ್ಕೆಯವರು 1942ರಿಂದ 1967
5. ಎಮ್.ಜಿ.ಫಡ್ಕೆರವರು 1967ರಿಂದ 1973
6. ಎನ್ ಎಸ್ ಗೋಖಲೆ 1973– 1976
7. ಪ್ರಕಾಶ್ ಹೆಬ್ಬಾರ್ 1976–78
8. ಎನ್ ಎಸ್ ಗೋಖಲೆಯವರು –1978–80
9. ಎ.ಯಂ ಭಿಡೆ 1981–85
10. ರಘುಪತಿ ಹೆಬ್ಬಾರ್ 1985–91
11. ಶಶಿಧರ ಖಾಡಿಲ್ಕರ್ 1991–95
12. ಪಿ.ವಿ ಹೆಬ್ಬಾರ್ 1995–2009
13. ಎನ್. ಎಸ್. ಗೋಖಲೆ 2010–2019
14. ಜನಾರ್ದನ ಗೌಡ ನೂಜಿ 2020ರಿಂದ

### ಉಪಾಧ್ಯಕ್ಷರುಗಳಾಗಿ ಸೇವೆ ಸಲ್ಲಿಸಿದವರು/ ಸಲ್ಲಿಸುತ್ತಿರುವವರು:

ಶಿವರಾಮ ಖಾಡಿಲ್ಕಾರ್, ಅರಳಿಕಟ್ಟೆ ಗಣಪತಿ ಭಟ್

ಎ.ಎಂ.ಭಿಡೆ, ಸುಬ್ರಮಣ್ಯ ಹೆಬ್ಬಾರ್, ನಾರಾಯಣ ಖಾಡಿಲ್ಕಾರ್, ಪಿ. ಪ್ರಕಾಶ್ ಹೆಬ್ಬಾರ್, ಸುರೇಂದ್ರ ಆರ್. ಫಡ್ಕೆ, ಅನಂತರಾವ್ ಚಾರ್ಮಾಡಿ, ಕುಂಞಣ್ಣ ನಾಯ್ಕ, ನಾಗರಾಜ ಎಂ. ಫಡ್ಕೆ, ವಿ.ಟಿ.ಸೆಬಾಸ್ಟಿನ್, ಕೆ. ಪ್ರಕಾಶ ನಾರಾಯಣ (2020ರಿಂದ)

### ಕಾರ್ಯದರ್ಶಿ/ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾಗಿ ಸೇವೆ ಸಲ್ಲಿಸಿದವರು/ ಸಲ್ಲಿಸುತ್ತಿರುವವರು

ಹೆಚ್. ಸೀತಾರಾಮ ಭಟ್, ರಾಮ ರಾವ್, ನಾರಾಯಣ ಭಟ್ ಕೆ. ದಿನಕರ, ಶ್ರೀಕರ ರಾವ್, ರಾಮಕೃಷ್ಣ ಬಿ., ಶ್ಯಾಮ ಸುಂದರ ಬಿ.ಪಿ., ಯಮ್. ಯಸ್. ಶಿವಣ್ಣ ಗೌಡ, ಯಂ ಸಂಜೀವ ಶೆಟ್ಟಿ ಹಾಗೂ ಪ್ರಕೃತ ನಾರಾಯಣ ಫಡ್ಕೆ

### ನಿರ್ದೇಶಕರುಗಳಾಗಿ ಸೇವೆಸಲ್ಲಿಸಿದವರು/ ಸಲ್ಲಿಸುತ್ತಿರುವವರು

ಜಿ.ವಿ. ಪರಾಂಜಪೆ, ಅಬ್ದುಲ್ ರಹಿಮಾನ್, ಎಚ್. ಎಂ. ಭಿಡೆ, ಜಿ.ಜಿ. ಫಡ್ಕೆ, ಯು. ಇಬ್ರಾಹಿಂ ಮುಕ್ರಿ, ಡಿ. ಮಂಜುನಾಥಯ್ಯ, ಶ್ರೀಧರ. ಜಿ. ಭಿಡೆ, ಪಾಂಡುರಂಗ ಚಿಪಳೂಣ್ಕರ್, ಡಿ. ಹಾಮದ್ ಕುಞ, ಎ. ಗೋಪಾಲಕೃಷ್ಣ ಗೌಡ, ಅಕ್ಬರಾಲಿ ಬಿ.ಎಂ., ಮಹಾವೀರ ಜೈನ್, ಗೋವಿಂದ ಚಿಪಳೂಣ್ಕರ್, ಎಂ.ವಿ. ಪಟವರ್ಧನ್, ಲತಾ. ಜಿ. ಪಟವರ್ಧನ್, ಕೆ. ಅನಂತ ರಾವ್ ಚಾರ್ಮಾಡಿ, ಡಿ. ಮೋಹನ ರಾವ್, ಟಿ. ಡಿ. ರೋಕ್ಕಿ, ಸಿ. ಜೆ. ಕುರಿಯನ್, ಎ. ನಂದಕುಮಾರ್, ಎನ್.ಎಸ್. ಗೋಖಲೆ, ಎ. ರಾಮಚಂದ್ರ ಭಟ್, ಕೆ. ಸದಾನಂದ ಕಾಮತ್,ಎ. ಶಾಂತಪ್ಪ ಗೌಡ, ಗಜಾನನ ಫಡ್ಕೆ, ಪುಟ್ಟ ನಾಯ್ಕ ,ಟಿ. ರಾಮಚಂದ್ರ ಭಟ್,ಎ.ಜಿ ಪಟವರ್ಧನ್, ಕೆ. ಪೆರ್ಣ ಗೌಡ, ಕೆ. ಜಿನ್ನಪ್ಪ ಗೌಡ, ಕೃಷ್ಣ, ಜಿ.ಎಂ ತಾಮನ್ಕರ್, ಗೋವಿಂದ ಜಿ. ಮರಾಠೆ, ಕೃಷ್ಣ ಜಿ. ಫಡ್ಕೆ, ಬಿ ಬಾಲಚಂದ್ರ ರಾವ್, ವಿಷ್ಣು ಆರ್. ಪಟವರ್ಧನ್, ಸಿ.ಕೆ ಪೀತಾಂಬರನ್, ಎಸ್ ಅಬ್ದುಲ್ ಹಮೀದ್, ಪ್ರಭಾಕರ ಎಸ್ ಗೋಖಲೆ, ಎ. ಶೇಷಪ್ಪ ಗೌಡ, ತಂಬೂರಿ ರಾಮಚಂದ್ರ ಭಟ್, ನಾರಾಯಣ ಗೋಖಲೆ, ಮೃತ್ಯುಂಜಯ ಫಡ್ಕೆ, ಸತೀಶ ವಿ. ಭಿಡೆ, ಎ. ಗೋಪಾಲಕೃಷ್ಣ ಗೌಡ, ಶ್ರೀಮತಿ ಜ್ಯೋತಿ ಜೆ. ಫಡ್ಕೆ ಕೃಷ್ಣ.ಜಿ. ಮರಾಠೆ, ಕೃಷ್ಣ ರಾವ್, ನಾಮದೇವ ರಾವ್, ಕೊರಗಪ್ಪ ನಾಯ್ಕ, ಪಿ. ಓಬಯ್ಯ ಗೌಡ, ಮೋಹನಚಂದ್ರ ಗೋಖಲೆ, ಅಶೋಕ ಕುಮಾರ, ಮಿನಿ, ಬೇಬಿ, ಸುಮಾ ಎಂ. ಗೋಖಲೆ, ಎಂ. ಶಶಿಧರ ಕಲ್ಮಂಜ, ರಾಘವ ಕಲ್ಮಂಜ, ಸಂಜೀವ ಗೌಡ ಮಾಕಳ, ಶಶಿಧರ, ಶಶಿಧರ ಬಿ, ರಾಮಚಂದ್ರ ವಿ. ಫಡ್ಕೆ, ಲಿಂಗಪ್ಪ ಗೌಡ, ನಯನಾ.

### ವೃತ್ತಿಪರ ನಿರ್ದೇಶಕರಾಗಿ ಸೇವೆಸಲ್ಲಿಸುತ್ತಿರುವವರು

ಎನ್. ಎಸ್ ಗೋಖಲೆ, ನಿ.ಲ್. ಗಜಾನನ ವಝೆ

### ಸರಕಾರದಿಂದ ನೇಮಕಗೊಂಡ ನಿರ್ದೇಶಕರು

ರವೀಂದ್ರ ಮರಾಠೆ, ಉಮೇಶ ನಾಯ್ಕ, ಕಲ್ಯಾಣಿ, ಆನಂದ ನಾಯ್ಕ , ರಾಘವ ಶೆಟ್ಟಿ, ಶೋಭಾ, ರಾಮಣ್ಣ ಶೆಟ್ಟಿ, ಯನ್.ಪಿ ಅಂಗಾರ, ಸುಲೋಚನಾ, ನೋಣಯ್ಯ ನಾಯ್ಕ, ಬೋಜ ಮಲೆಕುಡಿಯ, ಬಿ. ಶ್ರೀನಿವಾಸ ರಾವ್

### ನಿವೃತ್ತಿಹೊಂದಿದ ಸಿಬ್ಬಂದಿ ವರ್ಗ

ವೈಕುಂಠಯ್ಯ, ಹಾಮದ್ ಬ್ಯಾರಿ, ರಾಮಕೃಷ್ಣ ಬಿ, ವಿಠಲ ಶೆಟ್ಟಿ, ಶ್ರೀರಾಮ ಭಟ್, ವಿಶ್ವನಾಥ ಭಟ್, ಕೆ. ವೆಂಕಟೇಶ್ವರ ಭಟ್, ಪಿ.ಟಿ ನಾಯ್ಕ, ಲೋಕಯ್ಯ ನಾಯ್ಕ, ಸುರೇಶ ಭಟ್, ಕೃಷ್ಣವೇಣಿ, ಬಿ. ಯಂ. ಗೌಸ್, ಸುಶೀಲಾ ಬಾಯಿ, ರಮೇಶ ಡೋಂಗ್ರೆ, ರಮೇಶ ಪರಾಂಜಪೆ, ಇಸುಬು, ಆನಂದ ಗೌಡ, ತೆರೆಸಾ ಸಿಕ್ವೆರಾ, ರಾಮಕೃಷ್ಣ ಗೋಖಲೆ

### ಈಗ ಇರುವ ಖಾಯಂ ಸಿಬ್ಬಂದಿ ವರ್ಗ

ನಾರಾಯಣ ಫಡ್ಕೆ, ಮಧುಕರ ರಾವ್, ಕರುಣಾಕರ ಎಮ್.ಎಸ್, ಚಂದ್ರಕಾಂತ ಪ್ರಭು, ಪ್ರಸನ್ನ ಪರಾಂಜಪೆ, ಸದಾನಂದ, ಘುಷ್ಪಾವತಿ, ಡೇವಿಸ್, ಬಾಬು, ಹೇಮಲತಾ, ಪುಷಲತಾ ಜೆ., ಶ್ರುತಿ, ಸ್ಮಿತಾ, ಪುಷ್ಪಾ ಬಿ.ಎಂ., ಸುಷ್ಮಾ, ಸಂಜೀವ, ಎಲ್ಯಣ್ಣ, ಇಸ್ಮಾಯಿಲ್, ವಸಂತ, ಕಾರ್ತಿಕ್, ಪ್ರಸಾದ್, ರಾಜೇಶ

**ಸರಾಫರಾಗಿ ಸೇವೆ**

ನಾರಾಯಣ ಆಚಾರ್ಯ, ಸುಂದರ ಆಚಾರ್ಯ ಹಾಗೂ ಪ್ರಕೃತ ಉಮೇಶ ಆಚಾರ್ಯ

**ತರಬೇತಿ ಪಡೆಯುತ್ತಿರುವ ಸಿಬ್ಬಂದಿ**

ಸ್ನೇಹಾ, ಭವ್ಯಾ, ಗಿರಿಜಾ, ಶಶಿಕಾಂತ, ತಿಮಲೇಶ, ತಾರೇಶ, ರವಿಶಂಕರ

**ಪಿಗ್ಮಿ ಸಂಗ್ರಹಗಾರರು**

ಕೆ.ಹೆಚ್ ಕೃಷ್ಣಪ್ಪ, ಡಿ ಜಯಂತ ರಾವ್, ಮಹಾದೇವ ಬೆಂಡೆ, ದಿನೇಶ ಗೌಡ, ಸುರೇಖಾ, ಪ್ರಿಯಾ ಸತೀಶ್, ಪುಟ್ಟ ಕುಲಾಲ್

**ಕಾವಲುಗಾರರು**


ಜಾನ್ ಗೋವಿಯಸ್, ಕಮಲಾಕ್ಷ, ಅಶೋಕ ಆಚಾರ್ಯ, ಮಾಂಕು, ತ್ಯಾಂಪಣ್ಣ ಶೆಟ್ಟಿ (ನಿವೃತ್ತಿ)

ಹಲವು ದಿನಗಳಿಂದ ಐದಾರು ಜನರ ತಂಡವು ಸಂಕಲನಕಾರರಾಗಿ ಈ ಎಲ್ಲಾ ಅಂಶಗಳನ್ನು ಸಂಗ್ರಹಿಸಿರುತ್ತೇವೆ. ಇವೆಲ್ಲವೂ ವಿವಿಧ ನಂಬಲರ್ಹ ಮೂಲಗಳಿಂದ ಪಡೆದ ಮಾಹಿತಿಗಳಾಗಿವೆ. ಶ್ರಮವಹಿಸಿ ಇಷ್ಟೆಲ್ಲಾ ಕೆಲಸಗಳನ್ನು ಮಾಡಿದ್ದರೂ **ಕಾಲಮಿತಿ, ಪ್ರಾರಂಭದ ಕೆಲವು ಮಾಹಿತಿಗಳ ಅಲಭ್ಯತೆಗಳ ಕಾರಣಗಳಿಂದ ನ್ಯೂನತೆ, ತಪ್ಪುಗಳು ಬಂದಿರಬಹುದು. ಈ ಬಗ್ಗೆ ಕ್ಷಮೆ ಇರಲಿ.**

**ಸರ್ವೇ ಜನಾಃ ಸುಖಿನೋ ಭವಂತು**








**ವರ್ಘಿ, ಶಶಾಂಕ್, ವಿಶ್ವನಾಥ್, ನಾಗರಾಜ್, ಎನ್.ಎಸ್., ಕೆ. ಪ್ರಕಾಶ ನಾರಾಯಣ**

******



**ಕೇರಳ ರಾಜ್ಯದ "ಪಾಕ್ಸ್"ಗಳ ಬಗ್ಗೆ ಹಾಗೂ ಇಲ್ಲಿ "2tier" ಅನುಷ್ಠಾನ ಗೊಳಿಸಿರುವ ಬಗ್ಗೆ ಮಾಹಿತಿ ನೀಡಿ ನೆರವಾದ ಶ್ರೀ ಕರುಣಾಕರ ನಂಬಿಯಾರ್ (ಕ್ಯಾಂಪ್ಕೊ (ನಿ.) ಮಂಗಳೂರು ಹಾಗೂ ಕಾಸರಗೋಡು ಡಿ.ಸಿ.ಸಿ. ಬ್ಯಾಂಕ್‌ಗಳ ಮಾಜಿ ನಿರ್ದೇಶಕರೂ ಸಹಕಾರ ಭಾರತೀಯ ರಾಷ್ಟ್ರೀಯ ಕಾರ್ಯದರ್ಶಿಗಳಲ್ಲೊಬ್ಬರು)ರವರಿಗೆ ನಮ್ಮ ಪ್ರೀತಿಪೂರ್ವಕ ನಮನಗಳು.**

# ನೂರರ ಸಂಭ್ರಮದಲ್ಲಿ ಮುಂಡಾಜೆ



❑ ನಾರಾಯಣ ಫಡಕೆ
ಸಿ.ಇ.ಓ

ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ, ಕೃಷಿಕರ, ಗ್ರಾಮೀಣ ಜನರ, ಕೃಷಿ ಉದ್ದೇಶಗಳಿಗೆ, ಸಾಲ ಸೌಲಭ್ಯ ನೀಡಲು ಆರಂಭಿಸಿ ಒಂದು ಶತಮಾನ ವಾಗಿದೆ. 1921 ರಲ್ಲಿ ಆರಂಭವಾದ ಈ ಸಂಘ ಇಂದು ಶತಮಾನೋತ್ಸವದ ಸಂಭ್ರಮದಲ್ಲಿದೆ. ಹಾಗೂ ಇಡೀ ಮುಂಡಾಜೆಯೇ ಈ ಸಂಭ್ರಮವನ್ನು ಸಂತಸದಿಂದ ಆಚರಿಸಿಕೊಳ್ಳುತ್ತಿದೆ.

ಗುಂಡಿ ಲಕ್ಷ್ಮೀನಾರಾಯಣ ದೇವಳದ ವಠಾರದಲ್ಲಿ ಗುಂಡಿ ದಿ| ನಾರಾಯಣ ಪದ್ಮನಾಭ ಖಾಡಿಲ್ಕರರ ಅಧ್ಯಕ್ಷತೆಯಲ್ಲಿ ಆರಂಭವಾದ ಸಂಘ, ಮುಂದೆ, ಕಾರ್ಯದರ್ಶಿಗಳಾಗಿದ್ದ ದಿ| ಭಿಡೆ ನಾರಾಯಣ ಭಟ್ಟರ ಮನೆಯಲ್ಲಿ ಕಾರ್ಯಾಚರಿಸಿ, 1942 ರಲ್ಲಿ ದಿ| ಜಿ.ಎನ್. ಭಿಡೆಯವರು ದಾನವಾಗಿ ನೀಡಿದ ನಿವೇಶನದಲ್ಲಿ (ಈಗಿನ ಕೇಂದ್ರ ಕಚೇರಿ ಮುಂಡಾಜೆ) ವ್ಯವಹಾರ ನಡೆಸಿ, ಪ್ರಕೃತ, ಮುಂಡಾಜೆ, ಕಲ್ಮಂಜ, ಚಿಬಿದ್ರೆ, ತೋಟತ್ತಾಡಿ, ಚಾರ್ಮಾಡಿ, ನೆರಿಯ ವ್ಯಾಪ್ತಿಯನ್ನು ಹೊಂದಿ, ಜಿಲ್ಲೆಯ, ತಾಲೂಕಿನ ಸದೃಢ ಸಂಘವಾಗಿ ಬೆಳೆದು ನಿಂತಿದೆ. ಇದಕ್ಕೆ ಕಾರಣೀಕರ್ತರಾದ ಸ್ಥಾಪಕರನ್ನು, ಮುನ್ನಡೆಸಿದ ಹಿರಿಯರನ್ನು ನೆನೆಯುವುದು ನಮ್ಮೆಲ್ಲರ ಕರ್ತವ್ಯ.

ಮಾನವ ಸಹಜವಾದ ಏಳು–ಬೀಳುಗಳನ್ನು ನಮ್ಮ ಸಂಘವು ಕಂಡಿದೆ. ಅದೆಲ್ಲವನ್ನು ದಾಟಿ, ಪ್ರಕೃತ ಉತ್ತುಂಗದತ್ತ ಹೆಜ್ಜೆ ಹಾಕುತ್ತಿದೆ. (ವಿವರ ಪ್ರತ್ಯೇಕವಾಗಿ ದಾಖಲಾಗಿದೆ).

ಕಳೆದ 8 ವರುಷಗಳಿಂದ ಸಾಲ ಮರುಪಾವತಿಯಲ್ಲಿ 100% ಸಾಧನೆ ಸಣ್ಣ ಮಾತಲ್ಲ. ಇದರ ಹಿಂದೆ ಆಡಳಿತ ಮಂಡಳಿಯ ಪರಿಶ್ರಮ, ವಿಶೇಷವಾಗಿ ಸಿಬ್ಬಂದಿಗಳ ದುಡಿಮೆಯೂ ಇದೆ.

ಸಂಘದ ಪ್ರವರ್ಧಮಾನಕ್ಕೆ ಹಲವರು ದುಡಿದಿದ್ದಾರೆ, ಈ ಪೈಕಿ ಹಿರಿಯ ಸಹಕಾರಿ ಎನ್.ಎಸ್. ಗೋಖಲೆಯವರ, ಕಾರ್ಯವೈಖರಿಯಿಂದ, ಸಂಘವಿಂದು, ಸಾಲದ ಜೊತೆಗೆ, ಬ್ಯಾಂಕಿಂಗ್, ಪಡಿತರ ವಿತರಣೆ, ರಸಗೊಬ್ಬರ ಮಾರಾಟ, ಜೊತೆಗೆ ಸಾಮಾಜಿಕ ಕಾಳಜಿಯಿಂದ ಕಾರ್ಯನಿರ್ವಹಿಸುತ್ತಿದೆ. ನನ್ನ ಉದ್ಯೋಗದ ಕಾಲದಲ್ಲಿ ಅಧ್ಯಕ್ಷರಾಗಿ, ಸಂಸ್ಥೆಯನ್ನು ಮುನ್ನೆಡೆಸಿದ, ಎ.ಎಮ್. ಭಿಡೆ, ರಘುಪತಿ ಹೆಬ್ಬಾರ್, ಶಶಿಧರ್ ಖಾಡಿಲ್ಕರ್, ಪಿ. ವೆಂಕಟ್ರಮಣ ಹೆಬ್ಬಾರ್, ಉಪಾಧ್ಯಕ್ಷ ವಿ.ಟಿ ಸೆಬ್ಯಾಸ್ಟಿಯನ್, ನಾಗರಾಜ ಫಡ್ಕೆ, ಅನಂತರಾವ್, ಕುಂಞಣ್ಣ ನಾಯ್ಕ ರವರ ಹಾಗೂ ಸಿ.ಇ.ಓ ಎಂ.ಎಸ್. ಶಿವಣ್ಣ ಗೌಡ ರವರ ದಕ್ಷ ಕಾರ್ಯನಿರ್ವಹಣೆ, ಸಹೋದ್ಯೋಗಿಗಳ ದುಡಿಮೆಯಿಂದ ಸಂಘವಿಂದು ಎತ್ತರಕ್ಕೆ ಬೆಳೆದಿದೆ.

ಯಾವುದೇ ಸಂಸ್ಥೆ ನಡೆಯು ಚೆನ್ನಾಗಿ ನಡೆಯಬೇಕಾದರೆ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ ಒಟ್ಟಾಗಿ ದುಡಿದಾಗ ಮಾತ್ರ ಸಾಧ್ಯ. ನಿಸ್ವಾರ್ಥ ಸೇವಾ ಮನೋಭಾವ ಅಷ್ಟೇ ಅಗತ್ಯವಿದೆ. ಒಂದು ಸಂಸ್ಥೆಯ, ಮುಖ್ಯಕಾರ್ಯನಿರ್ವಹಣಾಧಿಕಾರಿಯ ಹೊಣೆಗಾರಿಕೆ ಸಣ್ಣದಲ್ಲ, ಆಡಳಿತ ಮಂಡಳಿ, ಇಲಾಖಾಧಿಕಾರಿಗಳು, ಸಿಬ್ಬಂದಿವರ್ಗ, ಗ್ರಾಹಕರು, ಸದಸ್ಯರೊಂದಿಗೆ ಯಾರಿಗೂ ನೋವಾಗದಂತೆ, ಹಾಗಂತ, ಸಂಸ್ಥೆಯ ಹಿತಕಾಯ್ದುಕೊಂಡು ನಡೆಯಬೇಕಾಗುತ್ತದೆ. ಇಂದಿನ ವೇಗದ ಯುಗದಲ್ಲಂತು, ನಾವು ನೀಡುವ ಸೇವೆ 100 ಮೀಟರ್ ಓಟದಂತೆ ನಡೆಯಬೇಕಿದೆ. ಸಂಸ್ಥೆಗೆ ಹೊಸ ಆಡಳಿತ ಮಂಡಳಿಗಳು ಬಂದಾಗ ಅವರೊಂದಿಗೆ ಬೆರೆತು ಕಾನೂನು ಚೌಕಟ್ಟಿನಲ್ಲಿ ಕೆಲಸ ನಿರ್ವಹಿಸಿದಾಗ ಮಾತ್ರ ಸಂಘ ಸದೃಢವಾಗಬಲ್ಲದು.

ಶತಮಾನೋತ್ಸ ಸಂಕೀರ್ಣದ ಸ್ಥಾಪನೆಗೆ, ಹಿಂದಿನ ಆಡಳಿತ ಮಂಡಳಿಯವರ (ಎನ್.ಎಸ್. ಗೋಖಲೆಯವರ ತಂಡ) ದುಡಿಮೆ, ಇಲಾಖಾಧಿಕಾರಿಗಳ ಸಹಕಾರ, ಈ ನಿವೇಶನವನ್ನು, ಅಡೂರ್ ಹರ್ಷ ನಾರಾಯಣ ರಿಂದ ಖರೀದಿಸುವಲ್ಲಿ ಮುಂಡಾಜೆ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷರಾದ ಮಚ್ಚಿಮಲೆ ಶ್ರೀ ಅನಂತ ಭಟ್ಟರ ಸಹಕಾರವನ್ನೂ ಮರೆಯುವಂತಿಲ್ಲ. ಹೊಸ ಆಡಳಿತ ಮಂಡಳಿ (ಅಧ್ಯಕ್ಷ ಶ್ರೀ ಜನಾರ್ಧನ ಗೌಡರ ತಂಡ) ಹಗಲಿರುಳು ದುಡಿದಿದೆ. ಸಿಬ್ಬಂದಿಗಳ ದುಡಿಮೆಯನ್ನೂ ಉಲ್ಲೇಖಿಸುತ್ತಾ ಪ್ರತ್ಯಕ್ಷ, ಪರೋಕ್ಷ ಸಹಕರಿಸಿದ ಸರ್ವರನ್ನು ನೆನೆಯುವುದು ನನ್ನ ಕರ್ತವ್ಯವಾಗಿದೆ. ಇಲ್ಲಿ ಅಡೂರ್ ಸಹೋದರರನ್ನೂ ನೆನೆಯುತ್ತೇನೆ.

21.02.2021ರಂದು (ರವಿವಾರ) ಲೋಕಾರ್ಪಣೆಗೊಳ್ಳಲಿರುವ ಶತಮಾನೋತ್ಸವ ಸಂಕೀರ್ಣದ ನಿರ್ಮಾಣಕ್ಕೆ ನೂರಾರು ಕಾರ್ಯಕರ್ತರ ಬೆವರಿದೆ, ಸಾವಿರಾರು ಸದಸ್ಯರ ಸಹಭಾಗಿತ್ವವಿದೆ.

ಸಂಘದ ಬೆಳವಣಿಗೆಗೆ ಕಾರಣಕರ್ತರಾದ ಪ್ರತಿಯೊಬ್ಬರ ಕಾಣಿಕೆ ಈ ಸಂಸ್ಥೆಗಿದೆ. ಇದು ಹೀಗೆ ಮುಂದುವರಿಯಲಿ, ಸಹಕಾರಿ ಕ್ಷೇತ್ರಕ್ಕೆ ಮತ್ತಷ್ಟು ಮಂದಿ ಬಂದು ಪ್ರಾಮಾಣಿಕವಾಗಿ ದುಡಿಯುವಂತಾಗಲಿ, ಸಂಘ ಮತ್ತಷ್ಟು ಉತ್ತುಂಗಕ್ಕೇರಲಿ.

ಸದಸ್ಯ– ಆಡಳಿತ– ಸಿಬ್ಬಂದಿ 'ತ್ರಿಕೋನ'ದಂತೆ ಕೂಡಿ ನಡೆದಾಗಲೇ ಸಂಘದ ಅಭಿವೃದ್ಧಿ. 'ಸ್ಟಾರ್'ನಂತೆ ವಿಮುಖರಾಗಿದ್ದರೆ ಸಂಘದ ಅವನತಿಗೆ ಮತ್ತೇನೂ ಬೇಡ. ಈ ಎಚ್ಚರಿಕೆ ಸದಾ ಎಲ್ಲರಲ್ಲೂ ಇರಲಿ ಎಂದು ಆಶಿಸೋಣ.

~ ಜೈ ಸಹಕಾರ ~

******

# ಅಧ್ಯಕ್ಷರ ಮಾತು



ಹಿರಿಯ ಸಹಕಾರಿಗಳ ಮಾರ್ಗದರ್ಶನ, ಸದಸ್ಯರ ಭಾಗವಹಿಸುವಿಕೆ, ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ಪರಸ್ಪರ ಪ್ರಯತ್ನ, ನಮ್ಮ ಸಂಸ್ಥೆಯ ಅಭಿವೃದ್ಧಿಗೆ ಕಾರಣವಾಗಿದೆ. ಶತಮಾನೋತ್ಸವ ಆಚರಿಸುತ್ತಿರುವ ಈ ಸಂಸ್ಥೆಗೆ ದುಡಿದ ನೂರಾರು ಸಹಕಾರಿಗಳನ್ನು ಸಾವಿರಾರು ಸದಸ್ಯರನ್ನು ಈ ಸಂದರ್ಭದಲ್ಲಿ ನೆನೆಯುವುದು ನನ್ನ ಕರ್ತವ್ಯ. ಸಹಕಾರಿ ಕ್ಷೇತ್ರಕ್ಕೆ(ಆಡಳಿತಕ್ಕೆ) ಹೊಸದಾಗಿ ಪ್ರವೇಶಿಸಿರುತ್ತೇನೆ. ಹಿರಿಯರ ಮಾರ್ಗದರ್ಶನ, ಆಡಳಿತ ಮಂಡಳಿಯವರ ಪ್ರೋತ್ಸಾಹ, ಸಿಬ್ಬಂದಿಗಳ ಕಾರ್ಯಕ್ಷಮತೆಯಿಂದ, ಈ ಸಂಘ ಹೆಮ್ಮರವಾಗಿ ಬೆಳೆದು, ಸಾವಿರಾರು ಮಂದಿಗೆ ನೆರಳಾಗಿದೆ ಎಂದರೆ ಅತಿಶಯೋಕ್ತಿಯಾಗದು. ಸಹಕಾರಿ ತತ್ವಗಳನ್ನು ಅರಿತು, ಸದಸ್ಯರ ಆಶೋತ್ತರಗಳ ಈಡೇರಿಕೆಗೆ ಪ್ರಯತ್ನಿಸುತ್ತೇವೆ. ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಮಾತಿನಂತೆ, ಎಲ್ಲರೂ ಒಟ್ಟಾಗಿ ದುಡಿಯೋಣ. ಸಂಘದ ಅಭಿವೃದ್ಧಿಗೆ ಪಾಲುದಾರರಾಗೋಣ. ಎಲ್ಲರಿಗೂ ಒಳಿತಾಗಲಿ.

॥ ಸಹಕಾರಂ ಗೆಲ್ಗೆ ॥

**" ಜೈ ಸಹಕಾರಿ "**

**ಜನಾರ್ದನ ಗೌಡ ನೂಜಿ**
ಅಧ್ಯಕ್ಷರು

# ಸಿಬ್ಬಂದಿ ವರ್ಗ

## ಮುಂಡಾಜೆ ಕೇಂದ್ರ ಕಚೇರಿ



ನಾರಾಯಣ ಫಡ್ಕೆ
ಮುಖ್ಯ ಕಾರ್ಯನಿರ್ವಹಣಾಧಿಕಾರಿ



ಪ್ರಸನ್ನ ಪರಾಂಜಪೆ



ಡೇವಿಸ್ ಕೆ.ಎಸ್.



ಶ್ರೀಮತಿ ಪುಷ್ಪಲತಾ ಜೆ.



ಎಲ್ಯಣ್ಣ ಗೌಡ



ಶ್ರೀಮತಿ ಸ್ನೇಹಾ ಎಮ್.
ತರಬೇತುದಾರರು



ತಾರೇಶ್
ತರಬೇತುದಾರರು

## ಮುಂಡಾಜೆ ಶಾಖಾ ಕಚೇರಿ



ಚಂದ್ರಕಾಂತ ಪ್ರಭು ಎಂ.
ವ್ಯವಸ್ಥಾಪಕರು



ಶ್ರೀಮತಿ ಸ್ಮಿತಾ ಪಿ.ಎನ್.



ಶ್ರೀಮತಿ ಪುಷ್ಪ ಬಿ.ಎಂ.



ಇಸ್ಮಾಯಿಲ್



ಕು. ಭವ್ಯ
ತರಬೇತುದಾರರು

## ನಿಡಿಗಲ್ ಶಾಖಾ ಕಚೇರಿ




ಬಾಬು ಎಂ.



ಪ್ರಸಾದ ಗೌಡ

## ಕಕ್ಕಿಂಜೆ ಶಾಖಾ ಕಚೇರಿ



**ಮಧುಕರ್ ರಾವ್**
ವ್ಯವಸ್ಥಾಪಕರು



**ಸದಾನಂದ ಡಿ.**



**ಶ್ರೀಮತಿ ಹೇಮಲತಾ**



**ಶ್ರೀಮತಿ ಶ್ರುತಿ**



**ವಸಂತ**
ತರಬೇತುದಾರರು



**ರಾಜೇಶ್**



**ಕು. ಸುಚಿತ್ರ**
ತರಬೇತುದಾರರು



**ತಿರುಮಲೇಶ್**
ತರಬೇತುದಾರರು



**ಶಶಿಕಾಂತ**
ತರಬೇತುದಾರರು

---

## ನೆರಿಯ ಶಾಖಾ ಕಚೇರಿ



**ಕರುಣಾಕರ್ ಎಂ. ಎಸ್.**
ವ್ಯವಸ್ಥಾಪಕರು



**ಶ್ರೀಮತಿ ಪುಷ್ಪಾವತಿ ಡಿ.**



**ಶ್ರೀಮತಿ ಸುಷ್ಮಾ**



**ಸಂಜೀವ ಕೆ.**



**ಕಾರ್ತಿಕ್ ಜಿ.ಟಿ.**



**ರವಿ ಶಂಕರ್**
ತರಬೇತುದಾರರು

## ದೈನಿಕ ಠೇವಣಿ ಸಂಗ್ರಾಹಕರು


ಮಹಾದೇವ ಬೆಂಡೆ


ಜಯಂತ್ ರಾವ್ ಡಿ.


ಕೃಷ್ಣಪ್ಪ ಎಚ್.


ಪುಟ್ಟ ಕುಲಾಲ್


ದಿನೇಶ್ ಕುಮಾರ್


ಶ್ರೀಮತಿ ಪ್ರಿಯಾ ಸತೀಶ್


ಶ್ರೀಮತಿ ಸುರೇಖಾ ವಿ. ಶೆಟ್ಟಿ

## ಸರಾಫರು


ಉಮೇಶ್ ಆಚಾರ್

## ಕಾವಲುಗಾರರು


ಜೋನ್ ಗೋವಿಯಸ್


ಕಮಲಾಕ್ಷ ಗೌಡ


ಅಶೋಕ


ಮಾಂಕು